ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 32 | ಅಕ್ಟೋಬರ್ 21, 1979 | 40 ಪೈಸೆ

ಜನತಂತ್ರದ ನಾಶ

ನಮ್ಮ ದೇಶದ ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಅಲ್ಲಿಯ ಸರ್ವಾಧಿಕಾರಿ ಅಧ್ಯಕ್ಷ ಜಿಯಾ-ಉಲ್-ಹಕ್ ಅವರು ರಾಷ್ಟ್ರೀಯ ಚುನಾವಣೆಗಳನ್ನು ಅನಿರ್ದಿಷ್ಟವಾಗಿ ಮುಂದೂಡಿ, ರಾಜಕೀಯ ಪಕ್ಷಗಳಿಗೆಲ್ಲಾ ನಿರ್ಬಂಧ ಹೇರಿದ್ದು, ಪತ್ರಿಕೆಗಳಿಗೆ ಸೆನ್ಸಾರ್ ಹಾಕಿದ್ದು ಮತ್ತು ವಿರೋಧ ಪಕ್ಷಗಳ ಅನೇಕ ಧುರೀಣರುಗಳನ್ನು ಬಂಧಿಸಿರುವುದರೊಂದಿಗೆ ಪಾಕಿಸ್ತಾನದಲ್ಲಿ ಮತ್ತೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಜಾರಿಗೆ ಬರುವುದೆಂದು ನಂಬಿದ್ದವರ ಲೆಕ್ಕಾಚಾರಗಳೆಲ್ಲಾ ತಲೆಕೆಳಗಾಗಿದೆ. ಇಪ್ಪತ್ತೇಳು ತಿಂಗಳ ಹಿಂದೆ ಜುಲ್ಫಿಕರ್ ಅಲೀ ಭುಟ್ಟೊ ಅವರನ್ನು ಉರುಳಿಸಿ ತಮ್ಮ ಕೈಗೆ ಅಧಿಕಾರವನ್ನು ತೆಗೆದುಕೊಂಡ ದಂಡನಾಯಕ ಜಿಯಾ, ಕೆಲವೇ ತಿಂಗಳುಗಳಲ್ಲಿ ಚುನಾವಣೆಗೆ ಆದೇಶ ಹೊರಡಿಸಿದ್ದರು. ಪರಿಸ್ಥಿತಿ ಹದವಾಗಿಲ್ಲವೆಂಬ ಕಾರಣದಿಂದ ಮತ್ತೆ ಮುಂದೂಡಿದ ಚುನಾವಣೆಯನ್ನು ಈ ವರ್ಷ ಮಾರ್ಚಿ 23ರಂದು ನಡೆಸುವುದಾಗಿ ಸಾರಲಾಯಿತು. ಇದನ್ನು ಇನ್ನೂ ಮುಂದೂಡಲಾಗಿ ನವೆಂಬರ್ 17ರಂದು ಚುನಾವಣೆ ನಡೆಯಬೇಕಿತ್ತು. ಈಗ ಮತ್ತೆ ಅನಿರ್ದಿಷ್ಟವಾಗಿ ಮುಂದೂಡಲಾಗಿದೆ.

ಭುಟ್ಟೋರನ್ನು ಪದಚ್ಯುತಿಗೊಳಿಸಿ ಅಧಿಕಾರವನ್ನು ಕೈಗತ್ತಿಕೊಂಡ ಜಿಯಾ ಅವರು ತನ್ನ ಸ್ಥಾನವನ್ನು ಭದ್ರಗೊಳಿಸುವುದಕ್ಕಾಗಿ ಭುಟ್ಟೊರನ್ನು ಗಲ್ಲಿಗೇರಿಸಿದರು. ಜಗತ್ತಿನಾದ್ಯಂತ ಇದಕ್ಕೆ ಪ್ರತಿಭಟನೆ ಕಂಡುಬಂದದ್ದನ್ನು

ಸಂಪಾದಕೀಯ

ಜಿಯಾ ಗಣನೆಗೆ ತಂದುಕೊಳ್ಳಲೇ ಇಲ್ಲ. ಭುಟ್ಟೋ ಅವರನ್ನು ಗಲ್ಲಿಗೇರಿಸಿದರೂ, ಭುಟ್ಟೋ ಅವರ ಮಗಳು ಮತ್ತು ಪತ್ನಿಯವರುಗಳ ಧುರೀಣತ್ವದಲ್ಲಿ ಭುಟ್ಟೋರವರ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯು ನಾಶವಾಗುವುದಕ್ಕೆ ಬದಲು ಇನ್ನೂ ಜನಪ್ರಿಯವಾಗತೊಡಗಿತು. ಪೀಪಲ್ಸ್ ಪಾರ್ಟಿಯನ್ನು ದೂರವಿರಿಸಿ ಚುನಾವಣೆ ನಡೆಸಿದ ನಾಟಕವಾಡಲು ಜಿಯಾರವರು ಯೋಜನೆ ಹಾಕುತ್ತಿದ್ದಂತೆಯೇ ಪಾಕಿಸ್ತಾನದ ರಾಷ್ಟ್ರೀಯ ವಿರೋಧ ಒಕ್ಕೂಟ ಪಕ್ಷಗಳೂ ಕಪಟ ಚುನಾವಣೆಯಿಂದ ದೂರವಿರಲು ಯತ್ನಿಸಿದ್ದು ಸ್ಪಷ್ಟವಾಯಿತು. ಕಳೆದ ತಿಂಗಳು ಮೂರು ಪ್ರಾಂತಗಳಲ್ಲಿ ನಡೆದ ಸ್ಥಳೀಯ ಚುನಾವಣೆಗಳಲ್ಲಿ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಬೆಂಬಲಿತರು ಶೇ. 60 ರಿಂದ 80ರಷ್ಟು ಗೆದ್ದುದರಿಂದ, ಈ ಪಕ್ಷವನ್ನು ದೂರವಿಟ್ಟು ಚುನಾವಣೆ ನಡೆಸಿದರೆ ಜನತೆ ಒಪ್ಪಲಾರರೆಂಬ ಭಯದಿಂದ ವಿರೋಧ ಒಕ್ಕೂಟ ಪಕ್ಷವೂ ಚುನಾವಣೆಗಾಗಿ ತನ್ನ ಹೆಸರನ್ನು ದಾಖಲು ಮಾಡಲು ಮುಂದೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ, ತನ್ನ ಕಪಟದ ಚುನಾವಣೆಯ ತಂತ್ರವು ಫಲಕಾರಿಯಾಗದೆಂದು ಅರಿವಾದೊಡನೆಯೇ ಜಿಯಾ ತನ್ನ ನಿಜಬಣ್ಣವನ್ನು ಬಯಲು ಮಾಡಿರುವರು. ಪಾಕಿಸ್ತಾನದ ಸದ್ಯದ ಬೆಳವಣಿಗೆಯು ಬಹಳ ಅಪಾಯಕಾರಿಯಾಗಿದೆ.

ಮೂಲ ಸ್ವಾತಂತ್ರ್ಯಗಳನ್ನೆಲ್ಲಾ ತುಳಿದು, ಪ್ರಜಾಪ್ರಭುತ್ವವನ್ನು ನಾಶ ಮಾಡುವ ಜಿಯಾ ಅವರ ಯತ್ನ ತೀರಾ ಖಂಡನೀಯ. ಜಿಯಾ ಅವರು ಜನತಂತ್ರಕ್ಕೆ ಗೋರಿ ಕಟ್ಟುವುದನ್ನು ಜಗತ್ತಿನ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಪ್ರತಿಭಟಿಸಲೇಬೇಕು. ನೆರೆಯ ರಾಜ್ಯದಲ್ಲಿನ ಬೆಳವಣಿಗೆಯನ್ನು ಭಾರತ ದೇಶದ ಜನತೆಯು ಪ್ರತಿಭಟಿಸಲೇಬೇಕು. ●

ನವೆಂಬರ್ ಮೂರರಂದು ರಾಜ್ಯಮಟ್ಟದ ಸಮಾವೇಶ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಅಖಿಲ ಭಾರತ ಮುಸ್ಲಿಮ್ ಲೀಗ್ ಮತ್ತು ಕರ್ನಾಟಕ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು 15-10-79 ರಂದು ಸಭೆ ಸೇರಿ ನವೆಂಬರ್ ಮೂರರಂದು, ಬೆಂಗಳೂರಿನಲ್ಲಿ ಕೋಮು ಮತ್ತು ಸರ್ವಾಧಿಕಾರಿ ವಿರೋಧ ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಗಿದೆ. ರಿಪಬ್ಲಿಕನ್ ಪಕ್ಷ (ಗವಾಯಿ) ಮತ್ತು ಇತರ ಸಮಾನ ಅಭಿಪ್ರಾಯವುಳ್ಳ ಸಂಘಟನೆಗಳನ್ನೂ ಈ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿದೆ. ಈ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲು ಸಮಿತಿಯೊಂದನ್ನು ರಚಿಸಲಾಗಿದ್ದು, ಈ ಸಮಿತಿಗೆ ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಸಿದ್ಧರಾಮ ರೆಡ್ಡಿ, ಸಿ. ಪಿ. ಐ. ನ ಕಾಂ. ಎಮ್. ಎಸ್. ಕೃಷ್ಣನ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಎಂ. ಕೆ. ಭಟ್, ಮತ್ತಿತರ ಪಕ್ಷಗಳವರು ಸಂಚಾಲಕರುಗಳಾಗಿರುವರು.

17-10-79 ರಂದು ಮತ್ತೆ ಸಭೆ ಸೇರಿ ಸಮಾವೇಶದ ವಿವರಗಳನ್ನು ಚರ್ಚಿಸಲಾಗಿದೆ. ಈ ಸಮಾವೇಶಕ್ಕೆ ಶ್ರೀ ಮೋಹನ್‌ಧಾರಿಯ, ಶ್ರೀ ಮಧು ಲಿಮಯೆ, ಶ್ರೀ ಡಿ.ದೇವರಾಜ ಅರಸು, ಕಾಂ. ಇ. ಎಮ್. ಎಸ್. ನಂಬೂದಿರಿಪ್ಪಾದ್, ಕಾಂ. ರಾಜೇಶ್ವರ ರಾವ್ ಮತ್ತು ಭೂಪೇಶ್ ಗುಪ್ತಾ ಇವರುಗಳನ್ನು ಆಮಂತ್ರಿಸಲೂ ತೀರ್ಮಾನಿಸಲಾಗಿದೆ. ಸಮಾವೇಶದ ಉದ್ದೇಶಗಳನ್ನು ವಿವರಿಸಲು ಕನ್ನಡ, ಇಂಗ್ಲೀಷ್, ತಮಿಳು ಮತ್ತು ಉರ್ದು ಭಾಷೆಗಳಲ್ಲಿ ಕರಪತ್ರಗಳನ್ನು ಅಚ್ಚು ಹಾಕಿಸುವುದು, ಸಹಸ್ರಾರು ಭಿತ್ತಿ ಪತ್ರಗಳನ್ನು ಅಚ್ಚು ಹಾಕಿಸುವುದು, ಸಮಾವೇಶಕ್ಕೆ ಮೊದಲು ನಗರದ ಬೇರೆಬೇರೆ ಕಡೆಗಳಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸುವುದು, ಮೊದಲಾದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ಸಮಾವೇಶದಂದು ಬೇರೆಬೇರೆ ಪಕ್ಷಗಳಿಗೆ ಸೇರಿದ ಜನರು ತಮ್ಮ ಬಾವುಟಗಳನ್ನು ಹಿಡಿದುಕೊಂಡು ಮೆರವಣಿಗೆಯಲ್ಲಿ ನೆಹರೂ ಪಾರ್ಕಿಗೆ ಬರುವುದೆಂದೂ ತೀರ್ಮಾನಿಸಲಾಯ್ತು.

ಈ ಸಮಾವೇಶವನ್ನು ಯಶಸ್ವಿಗೊಳಿಸಲು ಮತ್ತು ರಾಜ್ಯದ ಎಲ್ಲಾ ಮೂಲೆಗಳೆಲ್ಲೂ ಪ್ರಚಾರ ನಡೆಸಿ, ಸಮಾವೇಶಕ್ಕೆ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಬರುವಂತೆ ಮಾಡಲು ಬೇರೆಬೇರೆ ಪಕ್ಷಗಳು ಮತ್ತು ಸಂಘಟನೆಗಳು ತಮ್ಮ ಎಲ್ಲಾ ಕೆಳ ಘಟಕಗಳಿಗೆ ತಿಳಿಸಬೇಕಾಗಿಯೂ ನಿರ್ಣಯಿಸಲಾಯ್ತು.

ಇಂದಿನ ರಾಜಕೀಯ ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಈ ಸಮಾವೇಶದ ಪ್ರಾಮುಖ್ಯತೆಯನ್ನು ಮನಗಂಡು ಇದನ್ನು ಯಶಸ್ವಿಗೊಳಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ದರ ಸಾಮೂಹಿಕ ಸಂಘಟನೆಗಳು ರಾಜ್ಯದಾದ್ಯಂತ ಶ್ರಮಿಸಬೇಕೆಂದು ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕರೆ ಇತ್ತಿರುವರು. ●

ಐಕ್ಯತೆಯ ಹಾದಿಯಲ್ಲಿ

ದಶಕದ ಹಿಂದಿನ ಮಾರ್ಕ್ಸಿಸ್ಟ್ ವಿರೋಧಿ ರಂಗವನ್ನು ಕೇರಳದಲ್ಲಿ ತೊರೆಯಲು ಸಿ. ಪಿ. ಐ. ನಿರ್ಧರಿಸಿದೆ. ಇದರಿಂದಾಗಿ ದೇಶದಲ್ಲಿ ಎಡಪಕ್ಷಗಳ ಐಕ್ಯತೆ, ಅದರಲ್ಲೂ ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ) ನಡುವಣ ಮೈತ್ರಿ ಬಲಗೊಳ್ಳಲು ಸಹಾಯವಾಗಿದೆ. ಸಿ. ಪಿ. ಐ. ನಾಯಕರ ಈ ಕ್ರಮದಿಂದಾಗಿ, ದೇಶದ ಎರಡು ಪ್ರಮುಖ ಎಡ ಪಕ್ಷಗಳ ನಡುವೆ ಇದ್ದ, ಅನೈಕ್ಯತೆ, ಭಿನ್ನಾಭಿಪ್ರಾಯಗಳ ಕಪ್ಪು ಅಧ್ಯಾಯ ಮುಗಿದಂತಾಯಿತು. ಇದು ಸ್ವಾಗತಾರ್ಹ ಬೆಳವಣಿಗೆ. 1979ರ ಜುಲೈನಲ್ಲಿ ಕೇಂದ್ರ ಸರಕಾರದಲ್ಲಿ ಬಿಕ್ಕಟ್ಟು ಉಂಟಾದಾಗ ನಮ್ಮ ಪಕ್ಷ ಹಾಗೂ ಸಿ. ಪಿ. ಐ. ನಾಯಕತ್ವದ ಒಂದು ವಿಭಾಗ ಯಾವ ಆಸೆಯನ್ನು ಇಟ್ಟುಕೊಂಡಿದ್ದರೊ, ಆ ಆಸೆ ನನಸಾಗಿ ಇಂದು ಐಕ್ಯತೆಯ ಹಾದಿಯಲ್ಲಿ ನಾವು ಸಾಗುತ್ತಿದ್ದೇವೆ. ಎಡ ಪಕ್ಷಗಳ ಹಿತೈಷಿಗಳು ಭಾರತದಲ್ಲಿ ಹಾಗೂ ವಿದೇಶಗಳಲ್ಲಿರುವ ರಾಜಕೀಯ ಶಕ್ತಿಗಳು ಹೊಸ ಬೆಳವಣಿಗೆಯಿಂದ ಹರ್ಷಿತರಾಗಿದ್ದಾರೆ.

ದೇಶದ ಜನತೆ ಹಾಗೂ ರಾಜಕೀಯ ಪಕ್ಷಗಳೊಂದಿಗೆ ಈ ಸಂತೋಷವನ್ನು ಹಂಚಿಕೊಳ್ಳುವ ಸಮಯದಲ್ಲಿ ನಾವು ಒಂದು ವಿಷಯವನ್ನು ಮರೆಯುವಂತಿಲ್ಲ. ಎಡ ಪಕ್ಷಗಳ ಐಕ್ಯರಂಗವನ್ನು ವಿಸ್ತರಿಸುವಲ್ಲಿ ಹಾಗೂ ಮೈತ್ರಿಯನ್ನು ಕಾಪಾಡಿಕೊಂಡು ಮುಂದುವರಿಸಿಕೊಂಡು ಹೋಗುವಲ್ಲಿ, ಅನೇಕ ಸಮಸ್ಯೆಗಳಿವೆ. ಇದರ ಬಗ್ಗೆಯೂ ನಾವು, ನಮ್ಮ ಸ್ನೇಹಿತರು ಗಮನವನ್ನು ಹರಿಸಬೇಕು. ಅನೇಕ ಜನಗಳು ಭಾವಿಸುವಂತೆ, ಸಮಸ್ಯೆ ಕೇವಲ ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರ ಹಾಗೂ ಜಾತೀಯವಾದಿ ಆರೆಸ್ಸೆಸ್ ನಿಯಂತ್ರಿತ ಜನತಾಪಕ್ಷವನ್ನು ಚುನಾವಣೆಗಳಲ್ಲಿ ಸೋಲಿಸುವುದಕ್ಕೆ ಮಾತ್ರ ಸಮಸ್ಯೆ ಸೀಮಿತವಾಗಿಲ್ಲ. ಚುನಾವಣಾ ಹೊಂದಾಣಿಕೆಗಳು ಮುಂದಿನ ಐಕ್ಯತಾ ವೇದಿಕೆಗೆ ಸೋಪಾನವಾಗುವುದರಲ್ಲಿ ಸಂಶಯವಿಲ್ಲ. ಆದರೆ, ಇದಕ್ಕಿಂತ ಹೆಚ್ಚಾಗಿ, ಇಡೀ ದೇಶದಲ್ಲಿ ಬಂಡವಾಳಶಾಹಿ ಜಮೀನುದಾರರ ಆಡಳಿತಕ್ಕೆ ಪ್ರತಿಯಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ಕಾರ್ಯಕ್ರಮದ ಆಧಾರದ ಮೇಲೆ ಗಟ್ಟಿ ಸರಕಾರವನ್ನು ಜನತೆಗೆ ನೀಡಬಲ್ಲರು.

ಮುವತ್ತು ವರ್ಷಗಳ ಕಾಂಗ್ರೆಸ್ ಆಡಳಿತ ಹಾಗೂ 30 ತಿಂಗಳ ಜನತಾ ಪಕ್ಷದ ಆಡಳಿತದಲ್ಲಿ ಪ್ರಯೋಜನ ಪಡೆದವರು ಕೇವಲ ಬಂಡವಾಳಶಾಹಿಗಳು ಹಾಗೂ ಜಮೀನುದಾರರು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮುವತ್ತೆರಡು ವರ್ಷಗಳಲ್ಲಿ, ದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಉಳಿದೆಲ್ಲಾ ಕ್ಷೇತ್ರಗಳಲ್ಲಿ ಬಿಕ್ಕಟ್ಟು ತೀವ್ರವಾಗಿದೆ. ಈ ಆಳುವ ವರ್ಗಗಳು ಉಂಟುಮಾಡಿರುವ ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಿಲ್ಲದಂತಾಗಿದೆ; ವಿವಿಧ ರಾಜಕೀಯ ಪಕ್ಷಗಳ ಹೆಸರಿನಲ್ಲಿ, ಬೇರೆಬೇರೆ ಚುನಾವಣಾ ಪ್ರಣಾಳಿಕೆಗಳು, ಭರವಸೆಗಳನ್ನು ಬಂಡವಾಳಶಾಹಿ, ಜಮೀನುದಾರರ ನೇತೃತ್ವದಲ್ಲಿರುವ ಪಕ್ಷಗಳು ನೀಡುತ್ತಿವೆ. ಆದರೆ, ಇದರಿಂದ ಜನಗಳ ಕಷ್ಟಗಳಿಗೆ ಪರಿಹಾರ ಸಿಗುವುದು ಸಾಧ್ಯವಿಲ್ಲದ ಕೆಲಸ.

ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ (ಇಂದಿರಾ), ಜನತಾ ಮತ್ತು ಲೋಕದಳ-ಕಾಂಗ್ರೆಸ್ ಕೂಟಗಳು ಮೂರು

[ಕಡೆಯ ಪುಟ ನೋಡಿ]

ಕುಣಿಗಲ್‌ನಲ್ಲಿ ರೈತರ ಸಭೆ

ತಾಲೂಕು 6-10-1979ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಫೀಸಿನಲ್ಲಿ ತಾಲ್ಲೂಕು ರೈತರ ಸಭೆಯನ್ನು ಬಿದನಗೆರೆ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ಬಿ. ವಿ. ಗಂಗಣ್ಣಗೌಡರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆದಿತ್ತು. ಈ ಸಭೆಗೆ ತುಮಕೂರು ಜಿಲ್ಲೆಯ ರೈತ ಕಾರ್ಮಿಕರುಗಳ ಮುಖಂಡರುಗಳಾದ ಕಾಂ. ಹೆಚ್. ಸಿ. ಚನ್ನಪ್ಪ, ಕಾಂ. ಕೆ. ಆರ್. ನಾಯಕ್, ಕಾಂ. ವಿ. ಚಿಕ್ಕವೀರಯ್ಯ, ಕಾಂ. ಟಿ. ಎಲ್. ತಿಮ್ಮಪ್ಪ ಹಾಗೂ ಕಾಂ. ಮಹಮ್ಮದ್ ದಸ್ತಗೀರ್‌ರವರೂ ಸಹ ಈ ಸಭೆಯಲ್ಲಿ ಹಾಜರಿದ್ದು ನಂತರ ಹಾಲಿ ರೈತರಿಗಿರುವ ಸಂಕಷ್ಟಗಳನ್ನು ಚರ್ಚಿಸಿ ರೈತರ ಬಲವಾದ ಸಂಘಟನೆಯನ್ನು ಬೆಳೆಸಿ ಹೋರಾಟಕ್ಕೆ ಅಣಿಯಾಗದಿದ್ದರೆ ರೈತರ ಬಾಳು ಕಣ್ಣೀರಿನ ಗೋಳಾಗುತ್ತೆ. ಸಂಘಟನೆಯನ್ನು ಬಲಪಡಿಸುವುದಕ್ಕೋಸ್ಕರ ಇದೇ ತಿಂಗಳು ಅಕ್ಟೋಬರ್ 23-24 ರಂದು ತುಮಕೂರು ಜಿಲ್ಲಾ ರೈತ ಸಂಘದ ಎರಡನೇ ಸಮ್ಮೇಳನವನ್ನು ಕುಣಿಗಲ್‌ನಲ್ಲಿ ನಡೆಸುವಂತೆ ಸರ್ವಾನುಮತದಿಂದ ತೀರ್ಮಾನಿಸಿ ನಂತರ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸ್ವಾಗತ ಸಮಿತಿಯನ್ನು ಈ ಸಭೆಯಲ್ಲಿ ರಚಿಸಲಾಯಿತು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಶ್ರೀ ಯಲ್ಲಪ್ಪ, ಕುಣಿಗಲ್ ಪುರಸಭಾ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಸ್ವಾಗತ ಸಮಿತಿಯ ಉಪಾಧ್ಯಕ್ಷರುಗಳನ್ನಾಗಿ ಶ್ರೀ ಬಿ. ವಿ. ಗಂಗಣ್ಣಗೌಡರು, ಪಂಚಾಯ್ತಿ ಅಧ್ಯಕ್ಷರು ಬಿದನಗೆರೆ, ಕಾಂ. ಎನ್. ಬಿ. ಲಿಂಗದೇವರು ಪಂಚಾಯ್ತಿ ಸದಸ್ಯರು ಸಡೇಮಾವಿನಪುರ, ಕಾಂ. ಎಸ್. ಜ. ಯೂಸೂಫ್ ಖಾನ್, ಕುಣಿಗಲ್ ಪುರಸಭಾ ಉಪಾಧ್ಯಕ್ಷರು, ಶ್ರೀ ಕೆ. ವಿ. ರಾಮಣ್ಣನವರು ಪುರಸಭಾ ಸದಸ್ಯರು. ಬುಡ್ಡಕೋಟೇ ಗೌಡರು ಮಾಜಿ ಪಂಚಾಯ್ತಿ ಅಧ್ಯಕ್ಷರು ಬಿದನಗೆರೆ, ಕಾರ್ಯದರ್ಶಿಗಳನ್ನಾಗಿ ಕಾಂ. ಮಹಮದ್ ದಸ್ತಗೀರ್, ರಾಜ್ಯದ ಕಾರ್ಮಿಕ ಮುಖಂಡರು, ಕುಣಿಗಲ್ ಮತ್ತು ರಾಮಣ್ಣ ಬಿದನಗೆರೆ, ಖಜಾಂಚಿಯನ್ನಾಗಿ ಕಾಂ. ಬಡೇಸಾಬ್‌ರವರನ್ನೂ ಆರಿಸಿ ನಂತರ ಸಮ್ಮೇಳನದ ಸಿದ್ಧತೆಗೆ ಸುಮಾರು 30 ಮಂದಿ ತಾಲ್ಲೂಕಿನ ರೈತರುಗಳನ್ನು ಸ್ವಾಗತ ಸಮಿತಿಯ ಸದಸ್ಯರುಗಳನ್ನಾಗಿ ಈ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಹಾಸನದಲ್ಲಿ ಎಸ್.ಎಫ್.ಐ. ಶಾಖೆ ಪ್ರಾರಂಭ

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಹಾಸನಶಾಖೆ ಕಾಂ. ಚೆನ್ನೇಗೌಡರ ಸಂಚಾಲಕತ್ವದಲ್ಲಿ ತಾ. 5-10-79 ರಂದು ಪ್ರಾರಂಭವಾಯಿತು. ಸಂಘಟನೆಯನ್ನು ಬಲಗೊಳಿಸಲು ಹನ್ನೊಂದು ಜನರ ಸಂಘಟನಾ ಸಮಿತಿಯನ್ನೂ ರಚಿಸಲಾಯಿತು. ರಾಜ್ಯ ಶಾಖೆಯ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯರು ವಿದ್ಯಾರ್ಥಿಗಳ ಸಂಘಟನೆಯ ಅವಶ್ಯಕತೆ ಹಾಗೂ ಎಸ್. ಎಫ್. ಐ. ಕಾರ್ಯಕ್ರಮವನ್ನು ವಿವರಿಸಿದರು. ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಸಭೆಗೆ ಬಂದಿದ್ದರು.

ಹರಿಹರ ಪಾಲಿಫೈಬರ್ಸ್ ಕಂಟ್ರಾಕ್ಟ್ ಕೆಲಸಗಾರರ ಬಹಿರಂಗ ಸಭೆ

ದೇಶದ ಅತಿದೊಡ್ಡ ಶ್ರೀಮಂತ ಬಿರ್ಲಾ ನಡೆಸುತ್ತಿರುವ ಹರಿಹರ ಪಾಲಿಫೈಬರ್ಸ್‌ನಲ್ಲಿ ಕೆಲಸ ಮಾಡುತ್ತಿರುವ ಸುಮಾರು ಒಂದು ಸಾವಿರ ದಿನಕೂಲಿ ಕೆಲಸಗಾರರು ಸಂಘಟಿತರಾಗಿ ಸಿ. ಐ. ಟಿ. ಯು. ಬಾವುಟದ ಅಡಿಯಲ್ಲಿ ಹೋರಾಟ ನಡೆಸಲು ನಿರ್ಧರಿಸಿದರು. ತಾ. 8-10-79 ರಂದು ಫ್ಯಾಕ್ಟರಿಯ ಗೇಟಿನ ಬಳಿ ನಡೆದ ಬಹಿರಂಗ ಸಭೆಯಲ್ಲಿ ಹಾಜರಿದ್ದ ಅಂದಾಜು ಒಂದು ಸಾವಿರ ಕಾರ್ಮಿಕರು ಉತ್ಸಾಹದಿಂದ ಸಂಘಟನೆಯನ್ನು ಸ್ವಾಗತಿಸಿದರು. ಬಹಿರಂಗ ಸಭೆಯಲ್ಲಿ ಕಂಡುಬಂದ ವೈಶಿಷ್ಟ್ಯ, ಪೆಂಡರೆ, ಪಾಲಿಫೈಬರ್ ಕಾರ್ಖಾನೆಯ ಸಂಘಟಿತ ಕಾರ್ಮಿಕರು, ಅಸಂಘಟಿತ ಕಾರ್ಮಿಕರಿಗೆ ನೀಡಿದ ಮಾರ್ಗದರ್ಶನ ಹಾಗೂ ಬೆಂಬಲ. ಕಂಟ್ರಾಕ್ಟ್ ಕೆಲಸಗಾರರ ಬೇಡಿಕೆ ಈಡೇರದಿದ್ದರೆ, ಹೋರಾಟಕ್ಕೆ ಬೆಂಬಲವಾಗಿ ಕೆಲಸ ನಿಲ್ಲಿಸುವುದಾಗಿ, ಹರಿಹರ ಪಾಲಿಫೈಬರ್ಸ್ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಆನಂದರವರು ಆಡಳಿತ ವರ್ಗಕ್ಕೆ ಎಚ್ಚರಿಕೆ ನೀಡಿದರು.

ಕಂಟ್ರಾಕ್ಟ್ ಕೆಲಸಗಾರರ ಸಂಘದ ಅಧ್ಯಕ್ಷರಾಗಿ ಕಾಂ. ನಜೀರ್‌ಸಾಬ್, ಉಪಾಧ್ಯಕ್ಷರಾಗಿ ಕಾಂ. ಕುಟ್ಟಪ್ಪನ್ ನಾಯರ್ ಹಾಗೂ ಕಾರ್ಯದರ್ಶಿಯಾಗಿ ಕಾಂ. ಮದಾರ್‌ಸಾಬ್ ಆಯ್ಕೆಯಾದರು. ಅಲ್ಲದೆ ಹನ್ನೆರಡು ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಸಭೆಗೆ ಪರಿಚಯ ಮಾಡಿಕೊಡಲಾಯಿತು.

ಮುಖ್ಯ ಅತಿಥಿಗಳಾಗಿ ಬಂದಿದ್ದ, ಶಿರಸಿಯ ಖ್ಯಾತ ವಕೀಲರೂ, ರೈತ ಮುಂದಾಳುಗಳೂ ಆದ ಕಾಂ. ಧಾರೇಶ್ವರ್ ಹಾಗೂ ಭಾರತ ವಿದ್ಯಾರ್ಥಿ ಫೆಡರೇಶನ್ ರಾಜ್ಯ ಶಾಖೆಯ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್‌ರವರು ಕಾರ್ಮಿಕ ಸಂಘಟನೆಯ ಮಹತ್ವವನ್ನು ಕುರಿತು ಮಾತನಾಡಿ, ಹೋರಾಟಕ್ಕೆ ಜಯ ಕೋರಿದರು.

ಶಿಕ್ಷಣ ಸಚಿವರಿಗೆ ದ. ಕ. ಜಿಲ್ಲಾ ಶಿಕ್ಷಕರ ಸಂಘದ ಮನವಿ

ದ. ಕ. ಜಿಲ್ಲೆಯಲ್ಲಿ ಟಿ.ಸಿ.ಎಚ್. ತರಬೇತಿ ಪಡೆದು ಇನ್ನೂ ಉದ್ಯೋಗ ದೊರೆಯದೆ ಇರುವ ಸಂಖ್ಯೆ ಸುಮಾರು 2500 ರಷ್ಟಿದೆ. ಜಿಲ್ಲೆಯಲ್ಲಿ 7 ತರಬೇತಿ ಕೇಂದ್ರಗಳಿಂದ ಪ್ರತಿ ವರ್ಷವೂ ಉತ್ತೀರ್ಣರಾಗಿ ಬರುವವರು ಈ ನಿರುದ್ಯೋಗಿಗಳ ಸಂಖ್ಯೆಯನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಲೇ ಇದ್ದಾರೆ. 1972ನೇ ಇಸವಿಯಲ್ಲಿ ತರಬೇತಿ ಹೊಂದಿದ ಬಹುತೇಕ ಮಂದಿಗೂ ಇಂದಿಗೂ ಉದ್ಯೋಗ ದೊರೆತಿಲ್ಲ ಎಂಬುದು ಸತ್ಯಸಂಗತಿ.

ಜಿಲ್ಲೆಯಲ್ಲಿ ಇಂದು 800 ಈ ಶಿಕ್ಷಕರ ಸ್ಥಾನ ಖಾಲಿ ಇವೆ ಎಂದು 'ಶಿಕ್ಷಕ ವಾಣಿ'ತಿಳಿಸಿದೆ. ಆದರೆ ಈ ಸಾರಿ ಬರೇ 310 ಸ್ಥಾನಗಳನ್ನು ಮಾತ್ರ ಭರ್ತಿ ಮಾಡಲು ಅರ್ಜಿ ಕರೆಯಲಾಗಿದೆ.

19-8-1979 ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ಟಿ. ಸಿ. ಎಚ್. ತರಬೇತಾದ ನಿರುದ್ಯೋಗಿ ಶಿಕ್ಷಕರ ಸಂಘದ ಮಹಾಸಭೆಯು ಸೇರಿ ಈ ಕೆಳಗೆ ಕಾಣಿಸಿರುವ ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನು ಶಿಕ್ಷಣ ಸಚಿವರಿಗೆ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

ಬೇಡಿಕೆಗಳು:

1. ಡಿ. ಎಲ್. ಆರ್. ಸಿ. ಯ ಮೂಲಕ ಈ ನಿರುದ್ಯೋಗಿಗಳಿಂದ ಹೆಕ್ಕಿ ತೆಗೆದು ಕೆಲವೊಂದು ಸ್ಥಾನಗಳಿಗೆ ಮಾತ್ರ ಭರ್ತಿ ಮಾಡುವ ಕ್ರಮಗಳನ್ನು ಸಂಪೂರ್ಣವಾಗಿ ಕೈಬಿಡಬೇಕು.

2. ಶಿಕ್ಷಣ ತರಬೇತಿ ಹೊಂದಿ ಉತ್ತೀರ್ಣರಾದ ವರ್ಷವನ್ನೇ ಎಲ್ಲದಕ್ಕು ಆಧಾರವಾಗಿಟ್ಟುಕೊಂಡ (ಸೀನಿಯಾರಿಟಿ) ತೆರವಾದ ಶಿಕ್ಷಕರ ಸ್ಥಾನಗಳನ್ನು ತುಂಬುತ್ತಲೇ ಇರಬೇಕು.

3. ಜಿಲ್ಲೆಯಲ್ಲಿ ತೆರವಾದ ಶಿಕ್ಷಕರ ಸ್ಥಾನಗಳಿಗೆ ಆದಷ್ಟು ಮಟ್ಟಿಗೆ ಜಿಲ್ಲೆಯವರನ್ನೇ ಕೆಲಸಕ್ಕೆ ನೇಮಿಸಬೇಕು.

4. ಪದವೀಧರರನ್ನು ಸ್ಟೈಪೆಂಡರಿ ಅಥವಾ ಇತರ ಪದ್ಧತಿಗಳ ಪ್ರಕಾರ ಪ್ರೈಮರಿ ಶಾಲೆಗಳಲ್ಲಿ ಉಪಾಧ್ಯಾಯರನ್ನಾಗಿ ನೇಮಿಸಬಾರದು.

5. ಪ್ರೈಮರಿ ಶಾಲೆಗಳಲ್ಲಿ ಪ್ರತಿ 30 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ ಎಂಬ ಆಧಾರದ ಮೇಲೆ ಶಿಕ್ಷಕರ ನೇಮಕವಾಗಬೇಕು.

6. ಏಕೋಪಾಧ್ಯಾಯ ಶಾಲೆಗಳಲ್ಲಿ ಇನ್ನೊರ್ವ ಉಪಾಧ್ಯಾಯನನ್ನು ನೇಮಿಸಬೇಕು.

7. ಜಿಲ್ಲೆಯಲ್ಲಿ ಇನ್ನಷ್ಟು ಕಡೆ ಅಗತ್ಯವಾಗಿರುವ ಸ್ಥಳಗಳಲ್ಲಿ ಪ್ರೈಮರಿ ಶಾಲೆಗಳನ್ನು ಹೊಸದಾಗಿ ತೆರೆಯುವ ಏರ್ಪಾಡು ಮಾಡಬೇಕು.

8. ಈಗ ನಿರುದ್ಯೋಗಿಗಳಾಗಿರುವವರಿಗೆ ಎಲ್ಲರಿಗೂ ಕೆಲಸ ದೊರೆಯುವ ತನಕ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಹೊಸತಾಗಿ ತರಬೇತಿಗೊಳಿಸುವುದನ್ನು ತಾತ್ಕಾಲಿಕವಾಗಿ ತಡೆ ಹಿಡಿಯಬೇಕು.

ಈ ಬೇಡಿಕೆಗಳನ್ನು ಘನ ಸರಕಾರದವರು ಅನುಷ್ಠಾನಕ್ಕೆ ತಂದರೆ ಈ ಪ್ರಶ್ನೆಗೆ ಸ್ವಲ್ಪ ಮಟ್ಟಿಗಾದರೂ ಶಮನ ದೊರೆಯಬಹುದು ಎಂಬುದು ನಮ್ಮ ನಂಬಿಕೆ.

ಆದುದರಿಂದ ತಾವುಗಳು ಈ ಬೇಡಿಕೆಗಳನ್ನು ಪರಾಂಬರಿಸಿ ಅವುಗಳನ್ನು ಈಡೇರಿಸಿ ಇಂದು ಜಿಲ್ಲೆಯಲ್ಲೇ ಕಳೆದ ಏಳೆಂಟು ವರ್ಷಗಳಿಂದ ತರಬೇತಿ ಹೊಂದಿ ಇನ್ನೂ ನಿರುದ್ಯೋಗಿಗಳಾಗಿರುವ ಬಹುತೇಕ ಮಂದಿಯ ಸಮಸ್ಯೆಯನ್ನು ಪರಿಹರಿಸಿಕೊಡಬೇಕಾಗಿ ನಮ್ಮ ನಮ್ರ ವಿನಂತಿ.

ಜೆ.ಪಿ. ಯವರಿಗೆ ಎಸ್. ಎಫ್.ಐ. ಶ್ರದ್ಧಾಂಜಲಿ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ ಹೋರಾಟಗಾರ ಹಾಗೂ ತುರ್ತುಪರಿಸ್ಥಿತಿಯ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಜನತೆಯ ಮುಂದಾಳುತ್ವ ವಹಿಸಿದ ಜಯಪ್ರಕಾಶ್ ನಾರಾಯಣ್‌ರವರ ನಿಧನಕ್ಕೆ ಎಸ್. ಎಫ್. ಐ. ಕರ್ನಾಟಕ ರಾಜ್ಯಶಾಖೆ ತನ್ನ ಶ್ರದ್ಧಾಂಜಲಿ ವ್ಯಕ್ತಪಡಿಸಿದೆ.

ಗಾಂಧೀಜಿಯವರ ಕರೆಯಂತೆ, ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಭಾಗವಹಿಸಿದ ಭಾರತ ವಿದ್ಯಾರ್ಥಿ ಫೆಡರೇಶನ್, ಜೆ. ಪಿ. ಯವರ ಕರೆಯಂತೆ ತುರ್ತುಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೆ, 77ರ ಚುನಾವಣೆಗಳಲ್ಲಿ ಸರ್ವಾಧಿಕಾರಿಗಳ ವಿರುದ್ಧ ಪ್ರಚಾರ ನಡೆಸಿತ್ತು ಎಂಬುದಾಗಿ ಫೆಡರೇಶನ್ನಿನ ಪತ್ರಿಕಾ ಹೇಳಿಕೆ ತಿಳಿಸಿದೆ.

ನಿಧನ

ಸುಳ್ಯ ತಾಲ್ಲೂಕು ನೆಲ್ಲೂರು ಕೆಮ್ರಾಜೆ ಗ್ರಾಮದ ರೈತಸಂಘದ ಅಧ್ಯಕ್ಷ ಕಾಂ. ಕೆ. ಎನ್. ಸೀದಿಕುಂಞ ಯವರ ತಂದೆಯವರು 21-9-79 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಕುಟುಂಬಕ್ಕೆ ಸುಳ್ಯ ತಾಲ್ಲೂಕು ರೈತಸಂಘ ತನ್ನ ಸಂತಾಪವನ್ನು ಸೂಚಿಸಿದೆ.

ದಾಂಡೇಲಿಯ ಫೆರ್ರೋ ಅಲಾಯ್ಸ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ದಾಂಡೇಲಿಯ ಫೆರ್ರೋ ಅಲಾಯ್ಸ್ ಕಂಪೆನಿಯ ಮಾಲೀಕರು ಜುಲೈ 23ರಂದು ಬೀಗಮುದ್ರೆಯನ್ನು ಸಾರಿ, ಎಲ್ಲಾ ಕಾರ್ಮಿಕರ ಮತ್ತು ಕಾರ್ಮಿಕ ಮುಖಂಡರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದಾರೆ. ಎಲ್ಲರನ್ನೂ ದಾಂಡೇಲಿಯಿಂದ ಗಡೀಪಾರು ಮಾಡಿಸುವ ಸನ್ನಾಹ ಮಾಡಿ ಕಾರ್ಮಿಕರ ಮೇಲೆ ಯುದ್ಧವನ್ನೇ ಸಾರಿದ್ದಾರೆ. ಲೇಬರ್ ಇಲಾಖೆಯ ಅಧಿಕಾರಿಗಳು ಹಲವು ಸುತ್ತುಗಳ ಮಾತುಕತೆಗಳನ್ನು ನಡೆಸಿದ್ದರೂ ಈವರೆಗೆ ಕಾರ್ಮಿಕರ ಬೇಡಿಕೆಗಳು ಇತ್ಯರ್ಥವಾಗಿಲ್ಲ.

ಫೆರ್ರೋ ಅಲಾಯ್ಸ್ ಕಾರ್ಮಿಕರು ಸಿ.ಐ.ಟಿ.ಯು.ಗೆ ಸೇರಿರುವ ಎಲೆಕ್ಟ್ರೋ ಮೆಟಲರ್ಜಿಕಲ್ ಎಂಪ್ಲಾಯೀಸ್ ಯೂನಿಯನ್ನಿನ ಕೆಂಬಾವುಟದಡಿಯಲ್ಲಿ ಮಾಲೀಕರ ಅಕ್ರಮ ಬೀಗಮುದ್ರೆಯ ವಿರುದ್ಧ ಪಿತೂರಿ, ಅನ್ಯಾಯ,ದೌರ್ಜನ್ಯಗಳ ವಿರುದ್ಧ ಹೋರಾಡುತ್ತಿದ್ದಾರೆ. ಬೆಳಗಾವಿಯಲ್ಲಿರುವ ಇಂಡಾಲಿಯಂ ಕಾರ್ಮಿಕ ಸಂಘವು ಫೆರ್ರೋ ಅಲಾಯ್ಸ್ ಕಾರ್ಮಿಕರ ಹೋರಾಟ ನಿಧಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಪೇಪರ್ ಮಿಲ್ ಕಾರ್ಮಿಕರು ಸಹಾಯ ಮಾಡುತ್ತಿದ್ದಾರೆ.

ಆದರೆ ಹೋರಾಟ ಮೂರನೆಯ ತಿಂಗಳಿನಲ್ಲಿದೆ. ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರೆಯಬೇಕಾಗಿದೆ.

ದಾಂಡೇಲಿಯ ಫೆರ್ರೋ ಅಲಾಯ್ಸ್ ಕಾರ್ಮಿಕರ ಹೋರಾಟ ರಾಜ್ಯದ ಸಮಸ್ತ ಕಾರ್ಮಿಕರ ಹೋರಾಟ.

ಪ್ರತಿಯೊಂದು ಕಾರ್ಮಿಕ ಸಂಘವೂ ಕೂಡಲೇ ಫೆರ್ರೋ ಅಲಾಯ್ಸ್ ಕಾರ್ಮಿಕರ ಹೋರಾಟ ನಿಧಿಗೆ ಉದಾರವಾಗಿ ಧನಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಹಣವನ್ನು "ಕಾಂ.ಎಸ್. ಕೆ. ಸಾವಂತ್, ಅಧ್ಯಕ್ಷರು, ಎಲೆಕ್ಟ್ರೋ ಮೆಟಲರ್ಜಿಕಲ್ ಎಂಪ್ಲಾಯೀಸ್ ಯೂನಿಯನ್ ದಾಂಡೇಲಿ, ಉ.ಕ." ಈ ವಿಳಾಸಕ್ಕೆ ಕಳುಹಿಸಿರಿ. ಹಣ ಕಳುಹಿಸಿದ ಬಗ್ಗೆ ಸಿ.ಐ.ಟಿ.ಯು. ರಾಜ್ಯ ಕೇಂದ್ರಕ್ಕೂ, "ಐಕ್ಯರಂಗ" ಪತ್ರಿಕೆಗೂ ವರದಿಗಳನ್ನು ಕಳುಹಿಸಲು ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಕೋರಿದ್ದಾರೆ.

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಶೈಕ್ಷಣಿಕ ಸುಧಾರಣೆ – ತ್ರಿಪುರಾ ಎಡರಂಗ ಸರಕಾರದ ಅಮೋಘ ಸಾಧನೆಗಳು

ತ್ರಿಪುರಾ ರಾಜ್ಯದ ಎಡರಂಗ ಸರಕಾರವು ಅಧಿಕಾರಕ್ಕೆ ಬಂದ ಈ ಅಲ್ಪಾವಧಿಯೊಳಗಾಗಿ ತಾನು ಚುನಾವಣಾ ಪ್ರಣಾಳಿಕೆಯಲ್ಲಿ ಶೈಕ್ಷಣಿಕ ಸುಧಾರಣೆಗಳ ಬಗ್ಗೆ ನೀಡಿದ್ದ ಅನೇಕ ಆಶ್ವಾಸನೆಗಳಲ್ಲಿ ಹೆಚ್ಚಿನದನ್ನು ಈಗಾಗಲೇ ಈಡೇರಿಸಿದೆ. ಕೆಲವು ವಿಷಯಗಳಲ್ಲಂತೂ ವಿದ್ಯಾರ್ಥಿಗಳಿಗೆ ನೀಡಲಾಗಿದ್ದ ಆಶ್ವಾಸನೆಗಳಿಗಿಂತಲೂ ಸರಕಾರ ಹೆಚ್ಚು ನೆರವೇರಿಸಿಕೊಟ್ಟಿದೆ.

ಶಿಕ್ಷಣ ಪದ್ಧತಿಯು ನಮ್ಮ ಸಾಮಾಜಿಕ ವ್ಯವಸ್ಥೆಯಿಂದ ಪ್ರತ್ಯೇಕವಾಗಿಲ್ಲ; ಅದನ್ನು ಬೇರೆಯಾಗಿ ಕಾಣುವುದೂ ಅಸಾಧ್ಯ. ಬ್ರಿಟಿಷ್ ಆಳರಸರ ಕಾಲದಲ್ಲಿ ದೇಶದ ಶಿಕ್ಷಣ ಪದ್ಧತಿಯನ್ನು ಸುಧಾರಿಸುವ ನೆಪದಲ್ಲಿ ಶಿಕ್ಷಣವನ್ನು ಕೆಲವೇ ಪ್ರತಿಷ್ಠಿತರ ಗುತ್ತಿಗೆಯಾಗುವಂತೆ ಮಾರ್ಪಡಿಸಿ ಅದುಮೂಲಕ ದೇಶ, ಜನತೆ ಮತ್ತು ತಮ್ಮ ಸಾಮಾಜಿಕ ಹಿನ್ನೆಲೆಗಳ ಕುರಿತು ಏನೂ ಕಾಳಜಿಯಿಲ್ಲದಿರುವಂತಹ ವಿದ್ಯಾವಂತರ ವರ್ಗವೊಂದನ್ನು ಸೃಷ್ಟಿಸುವಲ್ಲಿ ಬ್ರಿಟಿಷರು ಸಫಲರಾದರು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಮುಂದುವರಿಕೆಗೆ ಭದ್ರವಾದ ಅಸ್ತಿಭಾರವನ್ನು ಒದಗಿಸುವುದೇ ಈ ವರ್ಗದ ಉದ್ದೇಶವಾಗಿತ್ತು. ವರ್ಗ ಸಮಾಜದಲ್ಲಿ ಅಧಿಕಾರವನ್ನು ಹೊಂದಿರುವ ವರ್ಗ ತನ್ನ ಹಿತಾಸಕ್ತಿಗಳ ಸಂರಕ್ಷಣೆಗಾಗಿ ಶಿಕ್ಷಣ ನೀತಿಯನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವುದು ಸಹಜ. ಬ್ರಿಟಿಷ್ ಆಳರಸರ ಮತ್ತು ಅವರಿಂದ ಅಧಿಕಾರವನ್ನು ಪಡೆದ ಭಾರತೀಯ ಬಂಡವಾಳಶಾಹಿಗಳ ಹಿತಾಸಕ್ತಿ ಹೆಚ್ಚು ಕಡಿಮೆ ಒಂದೇ ಆಗಿದ್ದ ಕಾರಣ ಸ್ವಾತಂತ್ರ್ಯಾನಂತರವೂ ಹಳೆಯ ಶಿಕ್ಷಣ ಪದ್ಧತಿಯನ್ನೇ ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಮುಂದುವರಿಸಿಕೊಂಡು ಬರಲಾಯಿತು. ದೇಶಕ್ಕೆ ಎಂತಹ ಪರಿಸ್ಥಿತಿಯಲ್ಲೂ ನೇತೃತ್ವವನ್ನು ನೀಡಬಲ್ಲ ಸತ್ಪ್ರಜೆಗಳಾಗಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವುದು ಶಿಕ್ಷಣದ ಉದ್ದೇಶವಾಗಿರಬೇಕೆಂಬ ತತ್ವ ಸಂಪೂರ್ಣ ಮೂಲೆಗುಂಪಾಯಿತು.

ಈ ನಡುವೆ ದೇಶದ ಆರ್ಥಿಕತೆಯಲ್ಲಿ ಕಾಣಿಸಿಕೊಂಡ ತೀವ್ರ ಸ್ವರೂಪದ ಮುಗ್ಗಟ್ಟು, ಮತ್ತು ಅದರ ಫಲವಾಗಿ ಬಂದ ರಾಜಕೀಯ ಮುಗ್ಗಟ್ಟುಗಳ ದುಷ್ಪರಿಣಾಮವು ಶಿಕ್ಷಣ ಕ್ಷೇತ್ರವನ್ನೂ ಕಾಡದೆ ಬಿಡಲಿಲ್ಲ. ಕಳೆದ ದಶಕದಲ್ಲಿ ದೇಶದ ವಿದ್ಯಾರ್ಥಿ ಯುವಜನರ ಪ್ರಜ್ಞೆ ಹಾಗೂ ಸ್ಥೈರ್ಯಗಳಲ್ಲಿ ತೀವ್ರ ಕುಸಿತ ಉಂಟಾದುದು ಕಂಡುಬಂದಿತು. ವಿದ್ಯಾರ್ಥಿ-ಯುವಜನ ಸಮುದಾಯ ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ವಿಶ್ವಾಸ ಕಳಕೊಂಡು ಸಾಂಸ್ಕೃತಿಕ ಅಧಃಪತನಕ್ಕೆ ಗುರಿಯಾಯಿತು. ಶಿಕ್ಷಣ ಕ್ಷೇತ್ರವನ್ನು ಬಾಧಿಸುತ್ತಿದ್ದ ಈ ಯಾವ ಪಿಡುಗುಗಳನ್ನೂ ನಿವಾರಿಸುವ ಗೊಡವೆಗೆ ಹೋಗದೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಇಂದಿರಾ ಸರಕಾರ ಶಿಕ್ಷಣವನ್ನು ರಾಜ್ಯಗಳ ವ್ಯಾಪ್ತಿಯಿಂದ ಕೇಂದ್ರದ ವ್ಯಾಪ್ತಿಗೆ ವರ್ಗಾಯಿಸಿಕೊಂಡಿತು. ಈ ಕ್ರಮವನ್ನು ಕೈಗೊಳ್ಳುವಾಗ ಶಿಕ್ಷಣ ಪ್ರಸಾರಕ್ಕೆ ಸಂಬಂಧಿಸಿದಂತೆ ಬೇರೆಬೇರೆ ರಾಜ್ಯಗಳ ಪ್ರಾದೇಶಿಕ ಅಸಮಾನತೆ ಹಾಗೂ ಕೆಲವೊಂದು ವೈಶಿಷ್ಟ್ಯಗಳನ್ನೂ ಅವಗಣಿಸಲಾಯಿತು.

ದೇಶದ ಇತರ ರಾಜ್ಯಗಳಂತೆ ತ್ರಿಪುರಾ ರಾಜ್ಯವೂ ಶಿಕ್ಷಣ ಕ್ಷೇತ್ರದ ಈ ಎಲ್ಲ ಬವಣೆಗಳನ್ನು ಸಾಕಷ್ಟು ಅನುಭವಿಸಿದೆ. ತ್ರಿಪುರಾ ಈ ಹಿಂದೆ ಪಾಳೆಯಗಾರಿ ರಾಜಮನೆತನದ ಆಳ್ವಿಕೆಯಲ್ಲಿದ್ದಾಗಲಂತೂ ಅಲ್ಲಿ ಶೈಕ್ಷಣಿಕ ಸವಲತ್ತುಗಳನ್ನು ನೀಡುವ ಹಾಗೂ ಸುಧಾರಿಸುವ ಯಾವುದೇ ಕ್ರಮ ನಡೆದಿರಲಿಲ್ಲ. ರಾಜಧಾನಿ ಅಗರ್ತಲಾ ಮತ್ತು ಕೆಲವು ಮುಖ್ಯ ಪಟ್ಟಣಗಳಲ್ಲಿ ಕೆಲವು ಶಾಲೆಕಾಲೇಜುಗಳಿದ್ದರೂ ಅವುಗಳ ಪ್ರಯೋಜನ ಪಡೆಯುತ್ತಿದ್ದವರು ಪ್ರತಿಷ್ಠಿತರ, ಮುಂದುವರಿದ ಜನಾಂಗಗಳ ಮಕ್ಕಳು ಮಾತ್ರ. ಸ್ವಾತಂತ್ರ್ಯಾನಂತರ ಈ ಪರಿಸ್ಥಿತಿಯಲ್ಲಿ ತುಸು ಬದಲಾವಣೆಯಾಗಿ ಕೆಲವು ಶಾಲಾ ಕಾಲೇಜುಗಳು ಸ್ಥಾಪಿಸಲ್ಪಟ್ಟವು: ವಿದ್ಯಾರ್ಥಿಗಳ ಸಂಖ್ಯೆಯೇನೋ ಹೆಚ್ಚಿತು. ಆದರೆ ಶಿಕ್ಷಣ ಸಂಸ್ಥೆಗಳು ಹೆಚ್ಚಿದಂತೆ ಅವುಗಳಿಗಾಗಿ ನೀಡಲಾಗುತ್ತಿದ್ದ ಸವಲತ್ತುಗಳು ಕಡಿಮೆಯಾದವು. ಇದರಿಂದಾಗಿ ತ್ರಿಪುರಾದ ಶೈಕ್ಷಣಿಕ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಂಡವೇ ಹೊರತು ಪರಿಹಾರವಾಗಲಿಲ್ಲ. ರಾಜ್ಯದಲ್ಲಿ ಶಾಲೆಗಳಲ್ಲಿ ಸುಮಾರು 2000 ಶಾಲೆಗಳ ಕಟ್ಟಡಗಳು ಕುಸಿದು ಬೀಳುವಂತಿದ್ದವು. ಕೆಲವೆಡೆ ಮಕ್ಕಳಿಗೆ ಕುಳಿತುಕೊಳ್ಳಲೂ ಸ್ಥಳವಿರಲಿಲ್ಲ. ಕಪಾಟುಗಳಿದ್ದಲ್ಲಿ ಪುಸ್ತಕಗಳಿರಲಿಲ್ಲ; ಪುಸ್ತಕಗಳಿದ್ದಲ್ಲಿ ಕಪಾಟುಗಳಿರಲಿಲ್ಲ. ಕುಡಿಯುವ ನೀರು, ಶೌಚಗೃಹ ಇತ್ಯಾದಿಗಳ ಬಗ್ಗೆಯಂತೂ ಬೇರೆ ಹೇಳಬೇಕಾಗಿಯೇ ಇಲ್ಲ. ಅಸಮಾನ ಬೆಳವಣಿಗೆ ಉಂಟುಮಾಡಿದ್ದ ಈ ಅವ್ಯವಸ್ಥೆ ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಇನ್ನಷ್ಟು ಕಲುಷಿತಗೊಳಿಸಿತು. ಶತಮಾನಗಳಿಂದ ಕಡೆಗಣಿಸಲ್ಪಟ್ಟಿದ್ದ ಗಿರಿಜನರು ಮತ್ತು ಬುಡಕಟ್ಟು ಜನಾಂಗದವರನ್ನು ಸುಧಾರಿಸುವ ಯಾವುದೇ ಪ್ರಯತ್ನ ನಡೆಯದ ಕಾರಣ ಸ್ವಾತಂತ್ರ್ಯ ದೊರೆತು 30 ವರ್ಷಗಳವರೆಗೂ ಅವರ ಪಾಲಿಗೆ ಶಿಕ್ಷಣ ಅಲಭ್ಯವಾಗಿತ್ತು. ಅವರ ಮಾತೃಭಾಷೆಯನ್ನೂ ಕಡೆಗಣಿಸಲಾಗಿತ್ತು. ಹೀಗಾಗಿ ಗಿರಿಜನರೂ, ಬುಡಕಟ್ಟು ಜನಾಂಗದ ಜನತೆಯೂ ರಾಜ್ಯದ ಜನತೆಯ ಮುಖ್ಯ ವಾಹಿನಿಯಿಂದ ದೂರವಾಗಿಯೇ ಉಳಿದರು. ಕೆಲವೊಂದು ವಿದ್ಯಾಸವಲತ್ತುಗಳು ಮುಂದುವರಿದ ಜನಾಂಗಗಳ ಪಾಲಿಗೂ ಸಿಗದಂತಾಯಿತು.

ವಿದ್ಯಾಕ್ಷೇತ್ರದ ಈ ಅವ್ಯವಸ್ಥೆಯಿಂದ ವಿದ್ಯಾರ್ಥಿಗಳೂ, ಶಿಕ್ಷಕರೂ ರೇಗುವಂತಾಯಿತು. ಆರ್ಥಿಕ ಹಾಗೂ ರಾಜಕೀಯ ಅಸ್ಥಿರತೆಗಳಿಂದಾಗಿ ಯುವಜನರಲ್ಲಿ ಪ್ರಜಾಸತ್ತಾತ್ಮಕ ಪ್ರಜ್ಞೆ ಮತ್ತು ಸಾಮಾಜಿಕ ಜವಾಬ್ದಾರಿ ಲುಪ್ತವಾಯಿತು. ಶಿಕ್ಷಣ ಕ್ಷೇತ್ರ ಕೊಳೆತು ನಾರಲಾರಂಭಿಸಿತು. ಸಾಮೂಹಿಕ ನಕಲು ಹೊಡೆಯುವುದು, ರ್‍ಯಾಗಿಂಗ್ ಮುಂತಾದ ದುಶ್ಚಟಗಳೂ ಶಾಲಾಕಾಲೇಜುಗಳಲ್ಲಿ ವ್ಯಾಪಿಸಿದವು. ಸುಲಭದಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದೇ ಶಿಕ್ಷಣದ ಮೂಲ ಉದ್ದೇಶವೆನಿಸಿಕೊಂಡಿತು.

ಇಂತಹ ಪರಿಸ್ಥಿತಿಯಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂತು. ತಮ್ಮ ಧೀರ ಹಾಗೂ ಸತತ ಹೋರಾಟಗಳ ಮೂಲಕ ಅಧಿಕಾರಕ್ಕೆ ಬಂದಿರುವ ಎಡರಂಗ ಸರಕಾರವನ್ನು ತ್ರಿಪುರಾದ ವಿದ್ಯಾರ್ಥಿ, ಯುವಜನರು ತಮ್ಮ ಸರಕಾರವೆಂದು ಸ್ವೀಕರಿಸಿದ್ದಾರೆ. ಎಷ್ಟೇ ಅಡಚಣೆಗಳಿದ್ದರೂ ರಾಜ್ಯಸರಕಾರದ ಅಧಿಕಾರ ಹಾಗೂ ಸಂಪನ್ಮೂಲಗಳು ಸೀಮಿತವಾಗಿದ್ದರೂ ತ್ರಿಪುರಾದ ಎಡರಂಗ ಸರಕಾರ ಕಳೆದ ಚುನಾವಣೆಯ ವೇಳೆಗೆ ತಾನು ವಿದ್ಯಾರ್ಥಿ, ಯುವಜನರಿಗೆ ನೀಡಿದ್ದ ಆಶ್ವಾಸನೆಗಳನ್ನು ಬಹುಪಾಲು ಈಡೇರಿಸುವಲ್ಲಿ ಯಶಸ್ವಿಯಾಗಿದೆ. ರಾಜ್ಯದ ಈ ಹಿಂದಿನ ಯಾವ ಸರಕಾರವೂ ಕನಸಿನಲ್ಲೂ ಎಣಿಸಲಾರದಂತಹ ಸುಧಾರಣೆಗಳು ಇಂದು ಶಿಕ್ಷಣ ಕ್ಷೇತ್ರದಲ್ಲಾಗಿವೆ. ಕಳೆದ 20 ತಿಂಗಳಲ್ಲಿ ತ್ರಿಪುರಾದ ವಿದ್ಯಾಕ್ಷೇತ್ರದಲ್ಲಿ ನಡೆದಂತಹ ಅಮೋಘ ಸುಧಾರಣೆಗಳಲ್ಲಿ ಈ ಕೆಳಗಿನವು ಮುಖ್ಯವಾಗಿವೆ.

ನಿರಕ್ಷರತಾ ನಿವಾರಣೆಗಾಗಿ ವ್ಯಾಪಕ ಯೋಜನೆ :

ಎಡರಂಗ ಸರಕಾರ ಅಧಿಕಾರಕ್ಕೆ ಬಂದ 20 ತಿಂಗಳಲ್ಲೇ 1700 ವಯಸ್ಕರ ಶಿಕ್ಷಣ ಕೇಂದ್ರ, 600 ಶಿಶುವಿಹಾರ ಕೇಂದ್ರ ಮತ್ತು 204 ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನು ಹೊಸದಾಗಿ ತೆರೆಯಲಾಗಿದೆ. 24 ಮಾಧ್ಯಮಿಕ ಶಾಲೆಗಳನ್ನು ಹೈಸ್ಕೂಲುಗಳನ್ನಾಗಿಯೂ, 34 ಕಿರಿಯ ಪ್ರಾಥಮಿಕ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳನ್ನಾಗಿಯೂ ಪರಿವರ್ತಿಸಲಾಗಿದೆ. ಶಿಕ್ಷಕರ ಕೊರತೆಯನ್ನು ನಿವಾರಿಸುವ ಸಲುವಾಗಿ ಎಡರಂಗ ಸರಕಾರವು ಈವರೆಗೆ 2542 ಅಧ್ಯಾಪಕರನ್ನು ಹೊಸದಾಗಿ ನೇಮಿಸಿಕೊಂಡಿದೆ. ಇವರಲ್ಲಿ 1284 ಪ್ರಾಥಮಿಕ ಶಿಕ್ಷಕರು, 445 ಪದವೀಧರ ಶಿಕ್ಷಕರು, 109 ಸ್ನಾತಕೋತ್ತರ ಅಧ್ಯಾಪಕರು 161 ಶಾರೀರಿಕ ಶಿಕ್ಷಕರು ಮತ್ತು 72 ಮಂದಿ ಗಿರಿಜನ ಭಾಷೆಯ (ಕೋಕ್ ಬರಾಕ್) ಉಪಾಧ್ಯಾಯರು. ಇದಕ್ಕೆ ಕಳೆದ ತಿಂಗಳು ಸರಕಾರವು ನೇಮಿಸಲು ನಿರ್ಧರಿಸಿರುವ 800 ಹೊಸ ಶಿಕ್ಷಕರನ್ನು ಸೇರಿಸಿದರೆ ಒಟ್ಟು ನೇಮಕಗೊಂಡಿರುವವರು 3342. ನಿರಕ್ಷರತೆಯನ್ನು ಹೋಗಲಾಡಿಸಲು ಎಡರಂಗ ಸರಕಾರ ಕೈಗೊಂಡಿರುವ ಪ್ರಾಮಾಣಿಕ ಪ್ರಯತ್ನಗಳಿಗೆ ಇಷ್ಟೇ ನಿದರ್ಶನ ಸಾಕು.

ಉಚಿತ ಶಿಕ್ಷಣ :

ಚುನಾವಣಾ ಪ್ರಣಾಳಿಕೆಯಲ್ಲಿ ಹತ್ತನೇ ತರಗತಿವರೆಗೆ ಉಚಿತ ವಿದ್ಯಾಭ್ಯಾಸವನ್ನು ಒದಗಿಸುವ ಆಶ್ವಾಸನೆ ನೀಡಲಾಗಿದ್ದರೂ ಎಡರಂಗ ಸರಕಾರ 12ನೇ ತರಗತಿಯವರೆಗೂ ಮುಫತ್ತಾಗಿ ಶಿಕ್ಷಣ ನೀಡುವ ಕ್ರಮ ಕೈಗೊಂಡಿದೆ. ಸುಮಾರು 2½ ಲಕ್ಷ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಎಲ್ಲಾ ಹಂತಗಳಲ್ಲೂ ಉಚಿತ ಶಿಕ್ಷಣ ನೀಡುವ ಏರ್ಪಾಡು ಮಾಡಲಾಗಿದೆ.

ಪುಸ್ತಕ, ಸೀಮೆಎಣ್ಣೆ ಹಾಗೂ ಮಧ್ಯಾಹ್ನದ ಉಪಾಹಾರ ವಿತರಣೆ:

ರಾಜ್ಯದ ಎಲ್ಲಾ ಭಾಗಗಳಲ್ಲೂ ಸ್ಥಾಪಿಸಲ್ಪಟ್ಟಿರುವ ಬುಕ್ ಬ್ಯಾಂಕ್‌ಗಳ ಮುಖಾಂತರ ಪಠ್ಯಪುಸ್ತಕಗಳನ್ನೂ, ಲೇಖನ ಸಾಮಗ್ರಿಗಳನ್ನೂ ತೀರಾ ಕಡಿಮೆ ಬೆಲೆಗೆ ವಿತರಣೆ ಮಾಡಲಾಗುತ್ತಿದೆ. ಪರಿಶಿಷ್ಟ ಜನಾಂಗ ಮತ್ತು ಬುಡಕಟ್ಟು ಜನಾಂಗಗಳ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಳ್ಳಲು ರೂ. 15ರಿಂದ ರೂ. 45ರ ವರೆಗೆ ಸಹಾಯಧನ ನೀಡಲಾಗುತ್ತಿದೆ. ಪಡಿತರ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಸೀಮೆಎಣ್ಣೆಯನ್ನು ಸರಬರಾಜು ಮಾಡಲಾಗುತ್ತಿದೆ. 1ನೇ ತರಗತಿಯಿಂದ 5ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಬಡತನದಿಂದಾಗಿ ಶಾಲೆಗೆ ತಪ್ಪಿಸಿಕೊಳ್ಳದಂತೆ ಅವರಿಗೆ ಮಧ್ಯಾಹ್ನದ ಉಪಹಾರವನ್ನು ಒದಗಿಸುವ ಯೋಜನೆಯನ್ನು ಸರಕಾರ ಇತ್ತೀಚೆಗೆ ಕೈಗೊಂಡಿದೆ ಸುಮಾರು 1.5 ಲಕ್ಷ ವಿದ್ಯಾರ್ಥಿಗಳು ಉಪಯೋಗ ಪಡೆಯುವ ಈ ಯೋಜನೆಗಾಗಿ ಸರಕಾರವು 2 ಕೋಟಿ ರೂ.ಗಳನ್ನು ವೆಚ್ಚ ಮಾಡಲಿದೆ.

ಹಳ್ಳಿಗಳಲ್ಲಿ ಶಿಶುವಿಹಾರ ಮತ್ತು ಮಕ್ಕಳಿಗಾಗಿ ಆಹಾರ ಕೇಂದ್ರಗಳ ಸ್ಥಾಪನೆ :

ಈ ಹಿಂದೆ ತ್ರಿಪುರಾದಲ್ಲಿ ಕೇವಲ 474 ಶಿಶುವಿಹಾರಗಳಿದ್ದವು. ಇದೀಗ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ 600 ಹೊಸ ಶಿಶುವಿಹಾರಗಳನ್ನು ತೆರೆಯುವ ಮೂಲಕ ರಾಜ್ಯದ 684 ಗ್ರಾಮ ಪಂಚಾಯತಿಗಳಲ್ಲಿ ಪ್ರತಿಯೊಂದರಲ್ಲೂ ಶಿಶುವಿಹಾರಗಳಿರುವಂತೆ ಮಾಡಿದೆ. ಐ. ಸಿ. ಡಿ. ಎಸ್. ಯೋಜನೆಯ ಆಶ್ರಯದಲ್ಲಿ ಚಾವಮನು, ತೆಲಿಮುರ ಮತ್ತು ಅಮರಪುರ ಬ್ಲಾಕುಗಳಿಗೆ ಸೇರಿದ 300 ಹಳ್ಳಿಗಳಲ್ಲಿ ಶಿಶು ಆಹಾರ ಕೇಂದ್ರಗಳನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಕೇಂದ್ರಗಳಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳ ಸ್ಥಾಪನೆ :

ವಿದ್ಯಾರ್ಥಿಗಳಿಗೆ ಸಂಘಟನಾ ಹಕ್ಕುಗಳನ್ನು ನೀಡಲಾಗಿದ್ದು ಶಾಲಾಕಾಲೇಜುಗಳ ವಿವಿಧ ಸಮಿತಿಗಳಿಗೆ ಅವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ವಿದ್ಯಾರ್ಥಿ ಅಧ್ಯಾಪಕ ಮತ್ತು ಸಂರಕ್ಷಕರ ನಡುವಿನ ಸಂಬಂಧ ಈಗ ತುಂಬಾ ಉತ್ತಮವಾಗಿದೆ.

ಶಾಲಾಕಟ್ಟಡಗಳ ದುರಸ್ತಿ ಮತ್ತು ಪಾಠೇತರ ಚಟುವಟಿಕೆಗಳು :

ಎಡರಂಗ ಸರಕಾರ ಅಧಿಕಾರಕ್ಕೆ ಬರುವ ವೇಳೆ ಜೀರ್ಣಾವಸ್ಥೆಯಲ್ಲಿದ್ದ 2000 ಶಾಲೆಗಳಲ್ಲಿ 880 ಶಾಲಾಕಟ್ಟಡಗಳನ್ನು 'ಕೆಲಸಕ್ಕೆ ಆಹಾರ' ಯೋಜನೆಯ ಮೂಲಕ ದುರಸ್ತಿಪಡಿಸಲಾಗಿದೆ. ಹೆಚ್ಚಿನ ಕಡೆ ಈ ಯೋಜನೆಯ ಅಂಗವಾಗಿ ಶಾಲಾಕಟ್ಟಡಗಳನ್ನೂ ಆಟದ ಬಯಲುಗಳನ್ನೂ ದುರಸ್ತಿಗೊಳಿಸುವ ಜವಾಬ್ದಾರಿಯನ್ನು ಸ್ಥಳೀಯ ಜನರೇ ವಹಿಸಿಕೊಂಡಿದ್ದಾರೆ. ಇದಕ್ಕೆ ಬೇಕಾಗುವ ಸಲಕರಣೆಗಳನ್ನೂ ಸ್ಥಳೀಯವಾಗಿಯೇ ಒದಗಿಸಿಕೊಳ್ಳಲಾಗುತ್ತಿದೆ. ಶಾರೀರಿಕ ಶಿಕ್ಷಣ ಮತ್ತು ಕ್ರೀಡಾ ಚಟುವಟಿಕೆಗಳಿಗಾಗಿ ವ್ಯಯ ಮಾಡಲಾಗುತ್ತಿದ್ದ ಹಣದ ಮೊತ್ತವನ್ನು ಹೆಚ್ಚಿಸಲಾಗಿದೆ. ಉತ್ತರ ತ್ರಿಪುರಾದ ಪಾಣಿಸಾಗರ ಎಂಬಲ್ಲಿ ಪ್ರಾದೇಶಿಕ ಶರೀರ ಶಿಕ್ಷಣ ತರಬೇತು ಕೇಂದ್ರವನ್ನು ಸ್ಥಾಪಿಸುವ ಯೋಜನೆ ಸರಕಾರಕ್ಕಿದೆ.

ಸಾಂಸ್ಕೃತಿಕ ರಂಗ, ನಾಟಕ, ಕಲೆ, ವಿಚಾರ ಸಂಕಿರಣಗಳು ಇತ್ಯಾದಿ ಸಮೂಹ ಸಂಪರ್ಕ ಸಾಧನಗಳಿಗೆ ಹೊಸ ರೂಪ ನೀಡಿ ಅವು ಹಿಂದಿನ ಕೊಳೆತ ಸಂಸ್ಕೃತಿಯ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಯೋಗ್ಯ ಅಸ್ತ್ರವಾಗುವಂತೆಯೂ ರಾಜ್ಯದ ಜನತೆಯ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ನೆರವಾಗುವಂತೆ ಯೋಗ್ಯಕ್ರಮಗಳನ್ನು ಎಡರಂಗ ಸರಕಾರ ಕೈಗೊಂಡಿದೆ.

●

ಕೋಟೇಶ್ವರ ಎಸ್.ಎಫ್.ಐ. ಪದಾಧಿಕಾರಿಗಳ ಆಯ್ಕೆ

ದ. ಕ. ಜಿಲ್ಲೆ, ಕುಂದಾಪುರ ತಾಲ್ಲೂಕು, ಕೋಟೇಶ್ವರದಲ್ಲಿ ಅಕ್ಟೋಬರ್ 7 ರಂದು ಎಸ್. ಎಫ್. ಐ. ಸದಸ್ಯರು ಸಭೆ ಸೇರಿ ಕಾರ್ಯಕಾರಿ ಸಮಿತಿ ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ಅಧ್ಯಕ್ಷರಾಗಿ ಅನ್ವರ್, ಉಪಾಧ್ಯಕ್ಷರಾಗಿ ಮುರಳೀಧರ್ ಉಡುಪ ಮತ್ತು ಕಾರ್ಯದರ್ಶಿಯಾಗಿ ಕೃಷ್ಣಯ್ಯ ಸೆಟ್ಟಿಗಾರ್‌ರನ್ನು ಆಯ್ಕೆ ಮಾಡಲಾಯಿತು. ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಕಾರ್ಯದರ್ಶಿ ಜಯಕುಮಾರ್‌ರವರು ವಿದ್ಯಾರ್ಥಿಗಳು ಹೆಚ್ಚಿನ ರೀತಿಯಲ್ಲಿ ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಹೋರಾಡಬೇಕೆಂದು ಕರೆ ನೀಡಿದರು. ಕೊನೆಯಲ್ಲಿ ಉಪಾಧ್ಯಕ್ಷರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮ ಮುಕ್ತಾಯವಾಗುವ ಮೊದಲು ವಿದ್ಯಾರ್ಥಿಗಳು ಬೀದಿಗಳಲ್ಲಿ ಎಸ್.ಎಫ್.ಐ.ಗಾಗಿ ನಿಧಿ ಸಂಗ್ರಹಿಸಿದರು. ಸಂಗ್ರಹವಾದ ಮೊತ್ತ ರೂ. 105.

○

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆ

[ಹಿಂದಿನ ಸಂಚಿಕೆಯಿಂದ]

ಹಿಂದಿನ ಕಾಂಗ್ರೆಸ್ ಸರ್ಕಾರದಂತೆ ಜನತಾಪಕ್ಷದ ಸರ್ಕಾರಕ್ಕೆ ವಿಶ್ವಬ್ಯಾಂಕಿನ ಸಹಾಯದಲ್ಲಿ ನಿಷ್ಠೆ ಇತ್ತು. ಅದು ವಿಶ್ವಬ್ಯಾಂಕಿನ ಸಲಹೆಯಂತೆ ಖಾಸಗಿ ಕ್ಷೇತ್ರಕ್ಕೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಟ್ಟಿತು. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಹ್ವಾನಗಳನ್ನು ಮತ್ತು ರಿಯಾಯ್ತಿಗಳನ್ನು ಕೊಟ್ಟಿತು. ರಫ್ತಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿತು. ಪೈಪೋಟಿಯ ಆಮದುಗಳಿಗೆ ಸಲಿಗೆ ತೋರಿತು. ಸರ್ಕಾರಿ ಯೋಜನೆಗಳಿಗೆ ಜಗತ್ತಿನ ಎಲ್ಲ ಕಡೆಗಳಿಂದ ಬಂದ ಟೆಂಡರ್‌ಗಳನ್ನು ಸ್ವೀಕರಿಸಿತು. ಪಾಶ್ಚಿಮಾತ್ಯ ಗುತ್ತೇದಾರಿ ಸಂಸ್ಥೆಗಳೊಂದಿಗೆ ಭಾರತದಲ್ಲಿ ಮಾತ್ರವಲ್ಲ, ಇಡೀ ಮೂರನೇ ಜಗತ್ತಿನಲ್ಲಿ ಜಂಟೀ ಉದ್ಯಮಗಳನ್ನು ಸ್ಥಾಪಿಸಿತು.

ಜನತಾಪಕ್ಷದ ನೀತಿಗಳ ಫಲಿತಾಂಶವೂ ಇಂದಿರಾ ಕಾಂಗ್ರೆಸ್ಸಿನ ನೀತಿಗಳ ಫಲಿತಾಂಶವೂ ಒಂದೇ ಆಗಲು ಕಾರಣವೇನು? ಕಾರಣ ಏನೆಂದರೆ ಈ ಎರಡೂ ಪಕ್ಷಗಳು ಇಂಡಿಯಾದ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ಪಥದ ಬೆಳವಣಿಗೆಯನ್ನು ಒಪ್ಪಿಕೊಂಡಿವೆ.

ಬಂಡವಾಳಶಾಹಿ ಪಥವೆಂದರೇನು? ಅದು ಬಂಡವಾಳಶಾಹಿ ಪದ್ಧತಿಯ ಪೂರ್ವದ ಭೂ ಸಂಬಂಧಗಳನ್ನು ಕಾಪಾಡಿಕೊಂಡು ಬರುವುದರಿಂದ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗುತ್ತದೆ.

ಅದು ಖಾಸಗಿ ಕ್ಷೇತ್ರದ ಮೇಲೆ ಅವಲಂಬಿತವಾಗಿರುತ್ತದೆ. ಖಾಸಗಿ ಲಾಭವೇ ಅದರ ಆಧಾರ. ಜೊತೆಗೆ, ಸಾರ್ವಜನಿಕ ಕ್ಷೇತ್ರವೂ ಖಾಸಗಿ ಕ್ಷೇತ್ರದ ಲಾಭಕೋರ ಅವಶ್ಯಕತೆಗಳಿಗೆ ತಕ್ಕಂತಿರುತ್ತದೆ.

ಪಾಶ್ಚಿಮಾತ್ಯ ದೇಶಗಳಿಂದ ಸಾಲ ಪಡೆದು ದೇಶವನ್ನು ಒತ್ತೆ ಇಡುವ ಬಂಡವಾಳಶಾಹಿ ಪಥದಿಂದಾಗಿ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಸಾಗುತ್ತದೆ. ಜೊತೆಗೆ ದೇಶೀ ಮಾರುಕಟ್ಟೆಯನ್ನು ಕುಗ್ಗಿಸಿ ಆರ್ಥಿಕ ಬಿಕ್ಕಟ್ಟಿಗೆ ಎಡೆಮಾಡಿಕೊಡುತ್ತದೆ. ಇದರಿಂದ ಜನತೆಯ ದಾರಿದ್ರ್ಯ ಹೆಚ್ಚಾಗುತ್ತದೆ. ಇನ್ನೊಂದು ಕಡೆ ಸಂಪನ್ಮೂಲಗಳು ಮತ್ತು ಸಂಪತ್ತು ಕೆಲವೇ ಗುತ್ತೇದಾರಿ ಸಂಸ್ಥೆಗಳ ಕೈಯಲ್ಲಿ ಕೇಂದ್ರೀಕೃತವಾಗುವಂತೆ ಮಾಡುತ್ತದೆ.

ಜನತಾ ಸರ್ಕಾರ ವಿಕೇಂದ್ರೀಕರಣದ ಬಗ್ಗೆ ಗಿಲೀಟು ಮಾತುಗಳನ್ನಾಡಿತು. ಆದರೆ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡುವುದಕ್ಕೆ ನಿರಾಕರಿಸಿತು. ರಾಜ್ಯಗಳಿಗೆ ಸ್ವಾಯತ್ತತೆ ಕೊಡುವುದು ರಾಷ್ಟ್ರದ ಐಕ್ಯತೆಗೆ ಪ್ರಜಾಪ್ರಭುತ್ವಕ್ಕೆ ತುರ್ತಾಗಿ ಮಾಡಬೇಕಾದ ಕ್ರಮವಾದರೂ ಜನತಾ ಸರ್ಕಾರ ಹೀಗೆ ಮಾಡಿತು. ಜೊತೆಗೆ ಹಿಂದಿಯೇತರ ರಾಜ್ಯಗಳ ಮೇಲೆ ಸೂಕ್ಷ್ಮವಾಗಿ ಹಿಂದಿಯನ್ನು ಹೇರುವುದರ ಮೂಲಕ ದೇಶದ ಐಕ್ಯತೆಯನ್ನು ಜನತಾಪಕ್ಷ ಮುರಿಯಲು ಪ್ರಯತ್ನಿಸಿತು.

ಕಳೆದ ಎರಡು ವರ್ಷಗಳಲ್ಲಿ ಜನತೆಯ ಸಂಕಷ್ಟಗಳು ಹೆಚ್ಚಾಗಿರುವುದರಲ್ಲಿ ಅಚ್ಚರಿಯೇನಿಲ್ಲ. ಸರ್ವಾಧಿಕಾರದ ವಿರುದ್ಧ ಜನ ತಂದುಕೊಟ್ಟ ಚುನಾವಣಾ ವಿಜಯವೇ ಸಂಕಷ್ಟದ ಮೂಲವಾಗಿ ಪರಿಣಮಿಸಿತು.

ಆರಂಭದಿಂದಲೇ ಪಕ್ಷದ ಒಳಜಗಳಗಳು ಆಡಳಿತವನ್ನು ನೀತಿಗಳ ಕಾರ್ಯಗತವನ್ನು ಸ್ಥಗಿತಗೊಳಿಸುವುದನ್ನು ಜನ ಕಂಡರು.

ಬೆಲೆಯೇರಿಕೆ, ಹರಿಜನರ ಮೇಲಿನ ದಬ್ಬಾಳಿಕೆ, ಮುಸ್ಲಿಮರ ಕಗ್ಗೊಲೆ-ಇವುಗಳಿಂದ ಜನರು ನರಳಿದರು. ಆದರೆ ಇವುಗಳನ್ನು ಸರಿಪಡಿಸಲು ಜನತಾಪಕ್ಷದ ನಾಯಕರಿಗೆ ವ್ಯವಧಾನ ವಿರಲಿಲ್ಲ. ತಮ್ಮ ತಮ್ಮ ಜಗಳದಲ್ಲೇ ಅವರು ನಿರತರಾಗಿದ್ದರು.

ಆರ್. ಎಸ್. ಎಸ್. ಮತ್ತು ಜನಸಂಘದ ಅಧೀನಕ್ಕೆ :

ಈ ಬೆಳವಣಿಗೆಗಳು ಪ್ರಜಾಪ್ರಭುತ್ವ ಧರ್ಮನಿರಪೇಕ್ಷತೆ ಮತ್ತು ದೇಶದ ಐಕ್ಯತೆಗೆ ಮಾರಕವಾಗಿದ್ದವು. ಜನತಾಪಕ್ಷದೊಳಗೆ ತುಂಬ ಚೆನ್ನಾಗಿ ಸಂಘಟಿತರಾಗಿದ್ದ ಪ್ರಜಾಪ್ರಭುತ್ವ ವಿರೋಧಿಮತ್ತು ಸರ್ವಾಧಿಕಾರಿ ಧೋರಣೆಯ ಹಿಂದೂ ಕಂದಾಚಾರಿಗಳಾದ ಆರ್.ಎಸ್.ಎಸ್. ಮತ್ತು ಜನಸಂಘದವರು ಪಕ್ಷವನ್ನು ಮತ್ತು ಸರ್ಕಾರವನ್ನು ನಿಯಂತ್ರಿಸತೊಡಗಿದರು. ಜಾತ್ಯತೀತತೆಗೆ ಬದ್ಧರಾದ ಸಮಾಜವಾದಿಗಳನ್ನು ಮೂಲೆಗುಂಪು ಮಾಡಲಾಯಿತು. ಹಿಂದಿನ ಬಿ. ಎಲ್. ಡಿ. ಪಾಲುದಾರರನ್ನು ಹೊರಗಟ್ಟಲಾಯಿತು.

ಅಧಿಕಾರದಾಹಿ ಆರ್.ಎಸ್.ಎಸ್.-ಜನಸಂಘದ ಕೂಟದವರು ಜನತಾಪಕ್ಷದ ವಿಘಟನೆಯನ್ನು ಆರಂಭಿಸಿದರು. ಜನಸಂಘದ ಪ್ರಾಬಲ್ಯವಿಲ್ಲದಿದ್ದ ಎಲ್ಲ ಜನತಾ ಸರ್ಕಾರಗಳ ವಿರುದ್ಧ ಅವರು ಕೆಲಸ ಮಾಡಿದರು.

ಉತ್ತರ ಪ್ರದೇಶದಲ್ಲಿ ರಾಮ್ ನರೇಶ್ ಯಾದವ್ ಸರ್ಕಾರವನ್ನು ಉರುಳಿಸಲು ಅವರು ಇಂದಿರಾ ಕಾಂಗ್ರೆಸ್ ಜೊತೆಗೂಡಿ ತಮ್ಮ ಪಕ್ಷದ ಸರ್ಕಾರದ ವಿರುದ್ಧವೇ ಮತ ನೀಡಿದರು. ಮತ್ತೊಮ್ಮೆ ಇಂದಿರಾ ಕಾಂಗ್ರೆಸ್ ಜೊತೆಗೆ ಸೇರಿ ಬಿಹಾರದ ಕರ್ಪೂರಿ ಠಾಕೂರ್ ಸರ್ಕಾರವನ್ನು ಉರುಳಿಸಿದರು. ಹಾಗೆಯೆ ತಮ್ಮ ನಿಯಂತ್ರಣದಲ್ಲಿಲ್ಲದಿದ್ದ ಹರ್ಯಾಣಾದ ದೇವೀಲಾಲ್ ಸರ್ಕಾರವನ್ನು ಉರುಳಿಸಿದರು. ಈ ಥರ ಇತರ ಗುಂಪುಗಳನ್ನು ಹೊರಗೆ ತಳ್ಳುತ್ತಾ, ಮೊರಾರ್ಜಿಯನ್ನು ನಾಮಕಾವಸ್ಥೆ ಮುಖ್ಯಸ್ಥನನ್ನಾಗಿಟ್ಟುಕೊಂಡು ಕೇಂದ್ರ ಸರ್ಕಾರದ ಸಂಪೂರ್ಣ ನಿಯಂತ್ರಣವನ್ನು ಪಡೆದುಕೊಳ್ಳಲು ಇವರು ಹವಣಿಸುತ್ತಿದ್ದರು.

ಅಲಿಗಡದ ಮಾರಕ ಗಲಭೆಗಳಲ್ಲಿ ಆರ್. ಎಸ್. ಎಸ್. ನ ಸ್ಥಳೀಯ ನಾಯಕನೊಬ್ಬನ ಕೈವಾಡವಿತ್ತು. ಆದರೆ ಜನತಾಪಕ್ಷದ ನಾಯಕತ್ವ ಆರ್. ಎಸ್. ಎಸ್. ನಿರ್ದೋಷಿ ಎಂದು ನಿಲುವು ತೆಗೆದುಕೊಂಡಿತು. ಈ ಆರ್. ಎಸ್. ಎಸ್. ನಾಯಕನ ಕೈವಾಡದ ಬಗ್ಗೆ ಜನತಾಪಕ್ಷದ ನಾಯಕನೊಬ್ಬನ ವರದಿಯನ್ನು ಮುಚ್ಚಿಡಲಾಯಿತು.

ಆರ್. ಎಸ್. ಎಸ್. ಗೆ ಸೇರಿದ ಶಾಸಕರೊಬ್ಬರು ಜೆಮ್‌ಷೆಡ್‌ಪುರದ ಮತೀಯ ಗಲಭೆಗಳಲ್ಲಿ ಪಾತ್ರವಹಿಸಿದ್ದರೂ ಅವರ ಮೇಲೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ.

ಹರಿಜನರ ವಿರುದ್ಧ ಅತ್ಯಾಚಾರಗಳು ಒಂದೇ ಸಮನೆ ಹೆಚ್ಚಾಗುತ್ತಿದ್ದರ ಬಗ್ಗೆಯೂ ಅವನ್ನು ತಡೆಗಟ್ಟದೆ ಇದೇ ರೀತಿಯ ಅನಾದರಣೆ ತೋರಿಸಲಾಯಿತು. ಸರ್ಕಾರದ ಬಗ್ಗೆ ಅಲ್ಪಸಂಖ್ಯಾತರು ತಮ್ಮ ವಿಶ್ವಾಸ ಕಳೆದುಕೊಳ್ಳುವಂತಾಗಲು ಇದು ಎಡೆಮಾಡಿಕೊಟ್ಟಿತು.

ಜನತಾಪಕ್ಷವನ್ನು ತಿರಸ್ಕರಿಸಿ :

ಜನತಾಪಕ್ಷದ ಮತ್ತು ರಾಜ್ಯಶಕ್ತಿಯ ಮೇಲೆ ಆರ್. ಎಸ್. ಎಸ್. ಜನಸಂಘವು ತನ್ನ ಏಕಸ್ವಾಮ್ಯ ಸ್ಥಾಪನೆಯ ಉದ್ದೇಶದ ಅರ್ಥವಾದರೂ ಏನು? ಈ ಪ್ರತಿಗಾಮಿ ಶಕ್ತಿಗಳು ಜನತಾಪಕ್ಷದ ನೆರಳಿನಲ್ಲಿ ಇದ್ದುಕೊಂಡು ಸರ್ಕಾರವನ್ನು ಪ್ರಜಾಸತ್ತೆಗೆ ವಿರುದ್ಧವಾದ ದಿಕ್ಕಿನಲ್ಲಿ, ಮತೀಯ ಹಾದಿಯಲ್ಲಿ ನಡೆಸಲು ಹವಣಿಸಿದವು. ಮತೀಯ ದೃಷ್ಟಿಕೋನವು ಎಂದೆಂದಿಗೂ ಪ್ರಜಾಸತ್ತಾತ್ಮಕ ದೃಷ್ಟಿಕೋನವಾಗಲಾರದು.

ಆರ್. ಎಸ್. ಎಸ್.-ಜನಸಂಘದ ಕೂಟವು ಕೇವಲ ಮತೀಯ ದೃಷ್ಟಿಕೋನವನ್ನು ಪ್ರತಿನಿಧಿಸುವದಿಲ್ಲ. ಬದಲಾಗಿ ಹಿಂದೂ ಸಂಪ್ರದಾಯ ಮತ್ತು ಆರ್ಥಿಕ ಅಸಮಾನತೆಗಳನ್ನೂ ಪ್ರತಿಪಾದಿಸುತ್ತದೆ.

ಸೌಲಭ್ಯಹೊಂದಿರುವ ಜಾತಿಗಳ ಮತ್ತು ಕೆಳಜಾತಿಗಳ ನಡುವಣ ಹೋರಾಟದಲ್ಲಿ ಆರ್. ಎಸ್. ಎಸ್. ಮೇಲ್‌ಜಾತಿಯರ ಪರ ನಿಲ್ಲುತ್ತದೆ. ಈ ಕಾರಣದಿಂದಾಗಿಯೇ ಜನತಾ ಸರ್ಕಾರದ ಆಳ್ವಿಕೆಯ ಅಡಿ ಹರಿಜನರ ಮೇಲೆ ಅತ್ಯಾಚಾರಗಳು ಜಾಸ್ತಿ ನಡೆದವು. ಇದರರ್ಥ ಸರ್ವಾಧಿಕಾರಿ ದೃಷ್ಟಿಕೋನವಲ್ಲದೆ ಮತ್ತೇನು? ರಾಜ್ಯಗಳಿಗೆ ಹೆಚ್ಚು ಅಧಿಕಾರ ಬೇಕು ಎನ್ನುವ ವಾದಕ್ಕೆ ಆರ್. ಎಸ್. ಎಸ್.-ಜನಸಂಘವು ವಿರೋಧ ಮಾಡುತ್ತದೆ ಮತ್ತು ಅತ್ಯಂತ ಬಲಿಷ್ಟವಾದ ಕೇಂದ್ರದ ಅಧಿಕಾರವನ್ನು ಅದು ಬೆಂಬಲಿಸುತ್ತದೆ.

ಹಿಂದೀ ಭಾಷೆಯನ್ನು ರಾಷ್ಟ್ರಭಾಷೆ ಎಂದು ಹಿಂದಿಯೇತರರ ಮೇಲೆ ಹೇರುವುದಕ್ಕೆ ಆರ್. ಎಸ್. ಎಸ್. ಜನಸಂಘದ ಕೂಟಗಳು ನಿಂತಿವೆ.

ಸಾರ್ವಜನಿಕ ಉದ್ಯಮಗಳ ಬೆಳವಣಿಗೆಗೆ ವಿರುದ್ಧ ಮತ್ತು ಪೈಪೋಟಿಯ ಮುಕ್ತ ಕೈಗಾರಿಕಾ ಬೆಳವಣಿಗೆಯ ಪರ ಆರ್. ಎಸ್. ಎಸ್.-ಜನಸಂಘಗಳು ನಿಲ್ಲುತ್ತವೆ.

1977 ರಲ್ಲಿ ಅತ್ಯಂತ ಉತ್ಸಾಹದಿಂದ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಿ ಅಧಿಕಾರಕ್ಕೆ ಬಂದ ಜನತಾಪಕ್ಷವು ಅಂದಿನ ಹಾಗೆ ಈಗ ಇಲ್ಲ. ಜಗಜೀವನ್‌ರಾಮ್ ಮತ್ತು ಕೆಲವು ಸಮಾಜವಾದಿ ನಾಯಕರ ನೆರಳಿನಲ್ಲಿ ನಿಜವಾಗಿಯೂ ಆರ್. ಎಸ್. ಎಸ್. ಮತ್ತು ಜನಸಂಘದ ಶಕ್ತಿಗಳು ಈಗಿನ ಜನತಾಪಕ್ಷವನ್ನು ನಿಯಂತ್ರಿಸುತ್ತಿವೆ. ಜಾತೀಯ ಶಕ್ತಿಗಳಾದ ಆರ್. ಎಸ್. ಎಸ್. ಅನ್ನು ಧಿಕ್ಕರಿಸುವ ಧೈರ್ಯವನ್ನು ಜನತಾಪಕ್ಷವು ತೋರಿಸಲಿಲ್ಲ. ಇಂತಹ ಜನತಾಪಕ್ಷವನ್ನು ಜನರು ಹಿಂದೆ ಮುಂದೆ ನೋಡದೆ ಕಾಂಗ್ರೆಸ್ (ಐ) ಪಕ್ಷದ ಜೊತೆಯಲ್ಲೇ ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.

ಬೆಚ್ಚಿ ಬೀಳಿಸುವ ಭ್ರಷ್ಟಾಚಾರ :

ಜನತಾಪಕ್ಷದ ಮತ್ತು ಸರ್ಕಾರದ ಉನ್ನತ ನಾಯಕರು ಭ್ರಷ್ಟಾಚಾರ ವ್ಯವಹಾರಗಳಲ್ಲಿ ತೊಡಗಿರುವ ವಿಷಯದಷ್ಟು ಸಾಮಾನ್ಯ ಮನುಷ್ಯನನ್ನು ಮತ್ಯಾವ ವಿಷಯವೂ ಬಾಧಿಸಿಲ್ಲ. ಇಂದಿರಾಗಾಂಧಿಯ ಕಾಲದಲ್ಲಿ ಇದ್ದಂತೆಯೇ ಜನತಾದವರ ಕಾಲದಲ್ಲೂ ಉನ್ನತ ನಾಯಕರ ಕುಟುಂಬದ ಆಸಕ್ತಿಗಳನ್ನು ಕಾಪಾಡಲು ಭ್ರಷ್ಟಾಚಾರಕ್ಕೆ ಇಳಿದಿದ್ದನ್ನು ನಮ್ಮ ಜನತೆ ಕಂಡಿದ್ದಾರೆ.

ಷಾ ಆಯೋಗ ಮತ್ತು ಗುಪ್ತಾ ಆಯೋಗದ ವರದಿಗಳು ಇಂದಿರಾಗಾಂಧಿಯ ಕಾಲದ ಭ್ರಷ್ಟಾಚಾರವನ್ನೆಲ್ಲಾ ಬಯಲಿಗೆಳೆದಿವೆ.

ಪ್ರಧಾನ ಮಂತ್ರಿಯ ಮಗನಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಲಾಯಿತು. ದೇಶದ ರಕ್ಷಣಾ ಇಲಾಖೆಯ ಆಸಕ್ತಿಗಳನ್ನು ಕಡೆಗಣಿಸಲಾಯಿತು. ಬ್ಯಾಂಕುಗಳಿಂದ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಪ್ರಧಾನಿ ಪುತ್ರನಿಗೆ ಕೊಡಲಾಯಿತು. ಸಾಲ ಕೊಡುವುದಕ್ಕೆ ಹಿಂಜರಿದ ಬ್ಯಾಂಕ್ ಅಧಿಕಾರಿಗಳನ್ನು ಕೆಲಸದಿಂದ ಕಿತ್ತುಹಾಕುತ್ತೇವೆ ಎಂದು ಹೆದರಿಸಲಾಯಿತು.

ಮಾರುತಿ ಕಾರು ಪೂರ್ಣ ಸ್ವದೇಶಿಯದೇ ಆಗಿರುತ್ತದೆ ಎಂದು ತಾಯಿ ಮತ್ತು ಮಗ ಇಬ್ಬರೂ ರಾಷ್ಟ್ರಕ್ಕೆ ಆಶ್ವಾಸನೆ ಕೊಟ್ಟರು. ಆದರೆ ಸಂಜಯ್‌ಗಾಂಧಿಯು ಜರ್ಮನಿಯ ಯಂತ್ರವೊಂದನ್ನು ಕದ್ದು ಮಾರುತಿಗೆ ಅಳವಡಿಸಿ ಅದು ದೇಶೀಯ ಯಂತ್ರವೆಂದು ಸಾರುತ್ತ ಹೊರಟ.

ಈ ಎಲ್ಲ ಕೃತ್ಯಗಳಲ್ಲೂ ಇಂದಿರಾ ಗಾಂಧಿಯ ಕೈವಾಡ ಪರೋಕ್ಷವಾಗಿ ಅಥವ ಅಪರೋಕ್ಷವಾಗಿ ಇತ್ತೆಂದು ತನಿಖಾ ಆಯೋಗಗಳು ಹೇಳಿವೆ. ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗಳಿಗೆ ತಪ್ಪು ಉತ್ತರಗಳನ್ನು ಕೊಟ್ಟು ಸಂಸತ್ ಅನ್ನು ತಪ್ಪು ದಾರಿಗೆ ಎಳೆಯಲಾಯಿತು.

ಭ್ರಷ್ಟಾಚಾರ ಕಾಂಗ್ರೆಸ್ಸಿಗೆ ಮಾತ್ರ ಮೀಸಲಿಲ್ಲ. ಅದು ಜನತಾ ಪಕ್ಷವನ್ನೂ ಧಾಳಿ ಮಾಡಿತು. ಮೊರಾರ್ಜಿ ಮಗ ಕಾಂತಿ ದೇಸಾಯಿಯ ಭ್ರಷ್ಟಾಚಾರ ರಾಜ್ಯ ಸಭೆಯಲ್ಲಿ ಚರ್ಚೆಗೆ ಬಂತು. ಮುರಾರ್ಜಿಯವರು ಇಂದಿರಾ ಗಾಂಧಿ ಮಾಡಿದಂತೇ ಪಕ್ಷಪಾತದ ಧೋರಣೆಯನ್ನು ತಮ್ಮ ಮಗನ ಬಗ್ಗೆ ತಾಳಿದರು. ಜನತಾ ಪಕ್ಷದ ಕೆಲವು ಮುಖ್ಯಮಂತ್ರಿಗಳು ಭ್ರಷ್ಟಾಚಾರಗಳಲ್ಲಿ ತೊಡಗಿದ್ದಾರೆಂದು ಅವರ ಪಕ್ಷದ ಸದಸ್ಯರೇ ಆರೋಪ ಮಾಡಿದ್ದಾರೆ. ಇನ್ನೊಬ್ಬ ಜನತಾ ಮುಖ್ಯ ಮಂತ್ರಿಯ ಮಗ ಕಪ್ಪು ಹಣವನ್ನು ಉಪಯೋಗಿಸುತ್ತಿದ್ದಾನೆಂದು ಆರೋಪ ಮಾಡಲಾಗಿದೆ.

ಅಧಿಕಾರ ಸ್ಥಾನಗಳಲ್ಲಿ ಇರುವವರು ಮತ್ತು ಅವರ ಮಕ್ಕಳು ಭ್ರಷ್ಟಾಚಾರದಲ್ಲಿ ತೊಡಗಿರುವುದು ಮತ್ತು ಸರ್ಕಾರಿ ಸಂಪತ್ತನ್ನು ಬಳಸಿಕೊಳ್ಳುತ್ತಿರುವುದು ಜನತೆಯ ಮೇಲೆ ಮತ್ತೆ ತೆರಿಗೆ ಹೇರಿಕೆಗೆ ದಾರಿ ಮಾಡಿಕೊಡುತ್ತದೆ. ಜನತಾ ಆಗಲಿ ಕಾಂಗ್ರೆಸ್ ಆಗಲಿ-ಯಾವ ಜಮೀನ್ದಾರಿ ಮತ್ತು ಬಂಡವಾಳಶಾಹಿ ಪಕ್ಷಗಳೂ ಜನತೆಗೆ ಶುದ್ಧ ಆಡಳಿತವನ್ನು ಒದಗಿಸುವಲ್ಲಿ ವಿಫಲವಾಗಿವೆ.

ಭ್ರಷ್ಟಾಚಾರದ ವಿರುದ್ಧ ಮತ್ತು ಶುದ್ಧ ಆಡಳಿತಕ್ಕಾಗಿ ಅವಿರತ ಹೋರಾಟವನ್ನು ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತೆಗೆ ಕರೆ ಕೊಡುತ್ತದೆ. ತಲೆಯಿಂದ ಬುಡ ಮುಟ್ಟದವರೆಗೆ ಭ್ರಷ್ಟಾಚಾರಿಗಳಿಂದ ತುಂಬಿ ಹೋಗಿರುವ ಜನತಾ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಈ ಚುನಾವಣೆಗಳಲ್ಲಿ ಧೂಳೀಪಟ ಮಾಡಿ ಎಂದು ಸಿ.ಪಿ.ಐ. (ಎಂ) ಕರೆ ಕೊಡುತ್ತದೆ.

ಶೈಕ್ಷಣಿಕ ಬಿಕ್ಕಟ್ಟು

(ಮುಂದಿನವಾರ ನೋಡಿ)

ಪ. ಬಂಗಾಳದ ಭೂಕಂದಾಯದ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು

ಎರಡು ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ತೀವ್ರ ವಿರೋಧವಿದ್ದರೂ ಬಲಕಮ್ಯುನಿಸ್ಟರ ಸಕ್ರಿಯ ಸಹಕಾರವಿಲ್ಲದಿದ್ದರೂ, ಆಗೋಸ್ತ್ 30, 1979 ರಂದು ಪ. ಬಂಗಾಳದ ವಿಧಾನಸಭೆಯಲ್ಲಿ ಭೂಹಿಡುವಳಿಯ ಕಂದಾಯದ ಕುರಿತಾದ ಒಂದು ಪುರೋಗಾಮಿ ಮಸೂದೆಯನ್ನು ಅಂಗೀಕರಿಸಲಾಯಿತು. ಪ. ಬಂಗಾಳದ ಎಡರಂಗ ಸರಕಾರದ ಭೂಸುಧಾರಣೆಯ ಮಂತ್ರಿ ಹಾಗೂ ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷರೂ ಆಗಿರುವ ಕಾಂ. ಬಿನಯ್ ಕುಮಾರ್ ಚೌಧುರಿಯವರು ವಿಧಾನಸಭೆಯಲ್ಲಿ ಮತ್ತು ಆಕಾಶವಾಣಿಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ, ಈ ಮಸೂದೆಯನ್ನು ಅಂಗೀಕರಿಸುವ ಮೂಲಕ ಎಡರಂಗವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಗೆ ನೀಡಿದ ಇನ್ನೊಂದು ಆಶ್ವಾಸನೆಯನ್ನು ಈಡೇರಿಸಿದಂತಾಯಿತು ಎಂದು ನೆನಪು ಮಾಡಿಕೊಟ್ಟರು. ಹೊಸ ಮಸೂದೆಯ ಉದ್ದೇಶಗಳು ಎರಡು. ಒಂದು, ಸಣ್ಣ ಮತ್ತು ಮಧ್ಯಮ ಮಟ್ಟದ ರೈತರನ್ನು ಸದ್ಯದ ದಮನಕಾರಿ ತೆರಿಗೆ ವಿಧಾನದಿಂದ ಮುಕ್ತಗೊಳಿಸುವುದು. ಎರಡು, ದೊಡ್ಡ ಭೂಹಿಡುವಳಿಗಾರರಿಗೆ ಕ್ರಮಾಗತವಾಗಿ ಏರುವ ದರದಲ್ಲಿ ಅವರ ಭೂಹಿಡುವಳಿಗನ ಗುಣವಾಗಿ ತರಿಗೆ ವಿಧಿಸುವುದು.

ರಾಜ್ಯದಲ್ಲಿ ಈಗ ಬಳಕೆಯಲ್ಲಿರುವ ಭೂಕಂದಾಯ ಪದ್ಧತಿಯಲ್ಲಿ ಈ ಮುಂಚೆ ಅಲ್ಪಸ್ವಲ್ಪ ಬದಲಾವಣೆಗಳಾಗಿದ್ದರೂ, ಮುಖ್ಯವಾಗಿ ಅದು ನಿರ್ದಯ ಹಾಗೂ ಪ್ರಾಚೀನ ಪಾಳೆಯಗಾರಿ ಪದ್ಧತಿಯ ಪರಂಪರೆಗಳನ್ನು ಹೊತ್ತಿದೆ. ಸದ್ಯ ರೈತನು ತೆರಬೇಕಾದ ಭೂಕಂದಾಯವನ್ನು ಬಹುಕಾಲದ ಹಿಂದೆ ಭೂಮಾಲಕರು ತಮಗೆ ಇಷ್ಟಬಂದಂತೆ ನಿರ್ಧರಿಸಿದುದಾಗಿದೆ. ಅದು ಅವನ ಆರ್ಥಿಕ ಸ್ಥಿತಿಗತಿಯನ್ನಾಗಲೀ ಮತ್ತಿತರ ಯಾವುದೇ ನ್ಯಾಯಬದ್ಧವಾದ ತಳಹದಿಯನ್ನಾಗಲೀ ಹೊಂದಿರುವುದಿಲ್ಲ.

ಮೊತ್ತಮೊದಲು ಸಂಯುಕ್ತರಂಗ ಸರಕಾರವು 1967-69ರ ಅವಧಿಯಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರ ಕಂದಾಯದ ಭಾರವನ್ನು ಇಳಿಸಲು 3 ಎಕರೆಗಳವರೆಗಿನ ಭೂಹಿಡುವಳಿಗಾರರಿಗೆ ಭೂಕಂದಾಯದಲ್ಲಿ ವಿನಾಯತಿ ನೀಡಿದುದನ್ನು ಇಲ್ಲಿ ಸ್ಮರಿಸಬಹುದು. ಮುಂದೆ ಕಂದಾಯದ ಮತ್ತು ಮೇಲು ಕಂದಾಯದ (Surcharge) ದರಗಳಲ್ಲಿ ಸ್ವಲ್ಪ ಬದಲಾವಣೆಗಳಾಗಿದ್ದವು. 1977ರಲ್ಲಿ ಎಡರಂಗ ಸರಕಾರವು ಸಣ್ಣ ಹಾಗೂ ಮಧ್ಯಮ ಮಟ್ಟದ ರೈತರಿಗೆ ಇನ್ನಷ್ಟು ರಿಯಾಯತಿಗಳನ್ನು ನೀಡಿತು. ನಾಲ್ಕು ಎಕರೆಗಳವರೆಗಿನ ನೀರಾವರಿ ಇರುವ ಮತ್ತು ಆರು ಎಕರೆಗಳವರೆಗಿನ ನೀರಾವರಿ ಇರದ ಭೂಹಿಡುವಳಿಗಳಿಗೆ ಭೂಕಂದಾಯದಲ್ಲಿ ವಿನಾಯತಿ ನೀಡಲಾಯಿತು. ಆದರೆ, ಈ ಪ್ರಸಕ್ತ ಭೂಕಂದಾಯ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡದೆ, ಈ ಎಲ್ಲಾ ಕ್ರಮಗಳೂ ತಾತ್ಕಾಲಿಕವಾಗಿದ್ದವು.

ದೇಶದಲ್ಲಿ ಬಳಕೆಯಲ್ಲಿರುವ ಹಳೆಯ ಭೂಕಂದಾಯ ಹಾಗೂ ಮೇಲು ಕಂದಾಯ ಪದ್ಧತಿಯ ಬದಲಿಗೆ ಭೂಹಿಡುವಳಿಯ ಆದಾಯಕ್ಕನುಗುಣವಾಗಿ ಕ್ರಮಾಗತವಾಗಿ ಏರುವ ದರದಲ್ಲಿ ವ್ಯವಸಾಯ ಭೂಹಿಡುವಳಿಗಳ ಮೇಲೆ ತೆರಿಗೆ ವಿಧಿಸಬೇಕೆಂದು ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ|| ಕೆ.ಎನ್.ರಾಜ್ ಅವರ ನೇತೃತ್ವದಲ್ಲಿನ ಒಂದು ತಜ್ಞ ಸಮಿತಿಯು ಕೆಲವು ವರುಷಗಳ ಹಿಂದೆಯೇ ಶಿಫಾರಸು ಮಾಡಿತ್ತು. ಆದರೆ, ಈ ಸಮಿತಿಯ ಸಲಹೆಗಳನ್ನು ಯಾವ ರಾಜ್ಯ ಸರಕಾರವೂ ಅಂಗೀಕರಿಸಿದ ಹಾಗಿಲ್ಲ. ಈ ವಿಷಯದಲ್ಲಿಯೂ ಎಡರಂಗ ಸರಕಾರವೇ ಪ್ರಥಮ ಹೆಜ್ಜೆಗಳನ್ನು ಕೈಗೊಳ್ಳಲು ಮುಂದಾಯಿತು. 1977ರಲ್ಲಿ ಎಡರಂಗ ಸರಕಾರವು ಅಧಿಕಾರಕ್ಕೆ ಬಂದೊಡನೆ ಸದ್ಯದ ಭೂಕಂದಾಯ ಪದ್ಧತಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಲು ಪರಿಶೀಲಿಸತೊಡಗಿತು. ಸಾಕಷ್ಟು ವಿಚಾರ ವಿನಿಮಯ ನಡೆದನಂತರ ಕಳೆದ ಡಿಸೆಂಬರ್‌ನಲ್ಲಿ ಭೂಹಿಡುವಳಿಗಳ ಮೇಲಿನ ತೆರಿಗೆಯ ಕುರಿತು ಹೊಸ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಮುಂದೆ ದೀರ್ಘಕಾಲದವರೆಗೆ ಮಸೂದೆಯ ಎಲ್ಲಾ ಅಂಶಗಳನ್ನು ಕೂಲಂಕುಶವಾಗಿ ಎಲ್ಲಾ ಪಕ್ಷಗಳ ಪ್ರಾತಿನಿಧ್ಯವಿರುವ ಸಿಲೆಕ್ಟ್ ಕಮಿಟಿಯಲ್ಲಿ ಚರ್ಚಿಸಲಾಯಿತು.

ಸಿಲೆಕ್ಟ್ ಕಮಿಟಿಯ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ವಿಧಾನಸಭೆಯಲ್ಲಿ ಬಿರುಸಿನ ಚರ್ಚೆಯ ಬಳಿಕ ಅಂಗೀಕರಿಸಲ್ಪಟ್ಟ ಭೂಹಿಡುವಳಿಗಳ ಮೇಲಿನ ಹೊಸ ತೆರಿಗೆ ಪದ್ಧತಿಯ ಮುಖ್ಯಾಂಶಗಳು ಹೀಗಿದೆ ;

1) ಭೂಹಿಡುವಳಿ ತೆರಿಗೆ ಪದ್ಧತಿಯು ಕೃಷಿ ಹಾಗೂ ಕೃಷಿಯೇತರ ಭೂಹಿಡುವಳಿಗಳಿಗೆ ಅನ್ವಯಿಸುವುದು.

2) ಹೊಸ ತೆರಿಗೆಯು ಭೂಹಿಡುವಳಿಗಳ ಮಾರುಕಟ್ಟೆಯ ಬೆಲೆಗಳಿಗನುಗುಣವಾಗಿರುವುದು.

3) ಮಾರುಕಟ್ಟೆಯ ಬೆಲೆಯನ್ನು ನಿರ್ಧರಿಸುವಾಗ ನಿರಾವರಿ ಸೌಕರ್ಯ, ಮಾರುಕಟ್ಟೆಯ ಸೌಕರ್ಯ, ಮಣ್ಣಿನ ಗುಣ, ಹವಾಮಾನ ಪರಿಸ್ಥಿತಿ, ಭೂಹಿಡುವಳಿಗಳ ಸರಾಸರಿ ಉತ್ಪಾದನಾ ಸಾಮರ್ಥ್ಯ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

4) ತೆರಿಗೆ ದರವು ಭೂಹಿಡುವಳಿಗಳ ಮಾರುಕಟ್ಟೆಯ ಬೆಲೆಯ ಶೇ. 10 ರಷ್ಟು ಮೌಲ್ಯದ ಆಧಾರದಲ್ಲಿರುವುದು. ಅಂತಹ ಮೌಲ್ಯದ (ratable value) ಮೊದಲ ರೂ. 5000ಕ್ಕೆ ತೆರಿಗೆ ವಿನಾಯತಿ ನೀಡಲಾಗುವುದು. ಅಂದರೆ, ರೂ. 50,000 ದವರೆಗಿನ ಮಾರುಕಟ್ಟೆ ಬೆಲೆ ಇರುವ ಭೂಹಿಡುವಳಿಗಳು ಹೊಸ ತೆರಿಗೆಯಿಂದ ವಿನಾಯತಿ ಪಡೆಯುವವು. ರೂ. 50,000 ಕ್ಕಿಂತಲೂ ಹೆಚ್ಚು ಮಾರುಕಟ್ಟೆ ಬೆಲೆ ಇರುವ ಭೂಹಿಡುವಳಿಗಳಿಗೆ ಅವುಗಳ ರೇಟೆಬಲ್ ಮೌಲ್ಯ (ratable value) ಗಳಿಗನುಗುಣವಾಗಿ ಕ್ರಮಾಗತವಾಗಿ ಏರಿಕೆಯ ದರದಲ್ಲಿ ತೆರಿಗೆ ವಿಧಿಸಲಾಗುವುದು.

5. ನಾಲ್ಕು ಎಕರೆಗಳಿಗಿಂತ ಕಡಿಮೆ ಭೂಹಿಡುವಳಿಗಳಿರುವ ರೈತರು ಹೊಸ ತೆರಿಗೆಯ ಕಾಯ್ದೆಯಂತೆ ತಮ್ಮ ಲೆಕ್ಕಪತ್ರಗಳನ್ನು ನೋಂದಾಯಿಸಬೇಕಾಗಿಲ್ಲ. ಇದರಿಂದ ತೆರಿಗೆ ಆಡಳಿತವು ಸುಲಭವಾಗುವುದರೊಂದಿಗೆ ಬಡ ಹಾಗೂ ಸಣ್ಣ ರೈತರಿಗೆ ಕಿರುಕುಳವಿಲ್ಲದಂತಾಗುವುದು.

6. ರಾಜ್ಯದ ಒಟ್ಟು 52 ಲಕ್ಷ ಭೂಹಿಡುವಳಿಗಾರರಲ್ಲಿ, ಸುಮಾರು 45 ಲಕ್ಷ ಸಣ್ಣ ಹಾಗೂ ಮಧ್ಯಮ ಮಟ್ಟದ ಭೂಹಿಡುವಳಿಗಾರರು ಈ ಹೊಸ ತೆರಿಗೆಯಿಂದ ವಿನಾಯತಿ ಪಡೆಯುವರು. ಉಳಿದ 7 ಲಕ್ಷ ಶ್ರೀಮಂತ ಹಾಗೂ ದೊಡ್ಡ ಭೂಹಿಡುವಳಿಗಾರರು ಕ್ರಮಾಗತವಾಗಿ ಏರುವ ದರಗಳಲ್ಲಿ ತಮ್ಮ ಭೂಹಿಡುವಳಿಯ ಮಾರುಕಟ್ಟೆಯ ಬೆಲೆಯ ಶೇ. 10 ರಷ್ಟು ಮೌಲ್ಯ (ratable value) ದ ಮೇಲೆ ಭೂತೆರಿಗೆಯನ್ನು ಕೊಡಬೇಕಾಗುವುದು. ಇದರಿಂದಾಗಿ, ತೆರಿಗೆಯ ಭಾರವು ನ್ಯಾಯಯುತವಾಗಿ ಹರಡಿದಂತಾಗುವುದು, ಕೃಷಿ ಉತ್ಪಾದನೆ ಹೆಚ್ಚುವುದು. ಸಂಪತ್ತುಗಳ ನ್ಯಾಯ ವಿತರಣೆಯಾಗಿ ಆರ್ಥಿಕ ಹಾಗೂ ಸಾಮಾಜಿಕ ಕಲ್ಯಾಣ ಉಂಟಾಗುವುದು ಮತ್ತು ರಾಜ್ಯದಲ್ಲಿ ಭೂಸುಧಾರಣೆಯ ಕಾರ್ಯಕ್ರಮವನ್ನು ಇನ್ನಷ್ಟು ಚುರುಕುಗೊಳಿಸಲು ಅನುಕೂಲವಾಗುವುದು.

7. ಈ ತೆರಿಗೆಯ ದರಗಳನ್ನು ನಿರ್ಧರಿಸಲು ರಾಜ್ಯ ಹಾಗೂ ಪ್ರಾದೇಶಿಕ ಮಟ್ಟಗಳಲ್ಲಿ ರೇಟಿಂಗ್ ಬೋರ್ಡುಗಳನ್ನು ಸ್ಥಾಪಿಸಲಾಗುವುದು. ಒಮ್ಮೆ ನಿರ್ಧರಿಸಿದ ತೆರಿಗೆ ದರಗಳು 5 ವರುಷಗಳವರೆಗೆ ಚಾಲ್ತಿಯಲ್ಲಿರುವವು. ಅವುಗಳನ್ನು ಹತ್ತು ವರ್ಷಗಳವರೆಗೂ ಮುಂದುವರಿಸಬಹುದು.

ಭೂಹಿಡುವಳಿಯ ಮೇಲಿನ ತೆರಿಗೆಯ ಮಸೂದೆಯು ಕುಂದುಕೊರತೆಗಳಿಂದ ಸಂಪೂರ್ಣ ಮುಕ್ತವಾಗಿದೆ ಎಂದು ಯಾರೂ ಹೇಳುವುದಿಲ್ಲ. ಆದರೆ, ಅದೊಂದು ಕ್ರಾಂತಿಕಾರಕ ಮಸೂದೆ. ಭಾರತದಲ್ಲಿ ಮೊತ್ತ ಮೊದಲ ಪ್ರಯೋಗ. ಹಳೆಯ ಪಾಳೆಯಗಾರಿ ಪರಂಪರೆಯ ಭೂಕಂದಾಯ ಪದ್ಧತಿಯನ್ನು ರದ್ದುಗೊಳಿಸಿ, ಭೂಹಿಡುವಳಿಗಳ ಬೆಲೆಗಳ ಮೇಲೆ ಆಧರಿತ ಕ್ರಮಾಗತವಾಗಿ ಏರಿಕೆಯ ದರಗಳಲ್ಲಿ ತೆರಿಗೆಯನ್ನು ವಿಧಿಸಲು ಅದು ಉದ್ದೇಶಿಸಿದೆ. ಅದನ್ನು ಕಾರ್ಯಗತಗೊಳಿಸುವಾಗ ಮುಂದೆ ಪಡೆಯುವ ಅನುಭವಗಳ ಆಧಾರದ ಮೇಲೆ ತೆರಿಗೆಯ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಬಹುದಾಗಿದೆ.

ಕಾಂ. ಬಿನಯ್‌ಕುಮಾರ್ ಚೌಧುರಿಯವರು ತಮ್ಮ ಆಕಾಶವಾಣಿ ಭಾಷಣದಲ್ಲಿ ಭೂಕಂದಾಯದ ವ್ಯವಸ್ಥೆಯನ್ನು ಬದಲಾಯಿಸುವ ಈ ಚಾರಿತ್ರಿಕ ಕೆಲಸಕ್ಕೆ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಪುರೋಗಾಮಿ ಶಕ್ತಿಗಳ ಬೆಂಬಲವನ್ನು ಕೋರಿದ್ದಾರೆ. ಅವಶ್ಯಕವಾಗಿ ತಡಮಾಡದೆ ಈ ಮಸೂದೆಗೆ ರಾಷ್ಟ್ರಪತಿಯವರು ತಮ್ಮ ಅಂಗೀಕಾರ ಮುದ್ರೆಯನ್ನು ನೀಡುವರೆಂದು ಆಶಿಸಲಾಗಿದೆ.

(ಪ. ಬಂಗಾಳ ಪತ್ರ :
ಸುಬ್ರತಪಾಲ್)

ಕಾಸರಗೋಡಿನಲ್ಲಿ ಸಿ. ಪಿ. ಐ. (ಎಂ) ವಿಜಯ

ಕೇರಳದಲ್ಲಿ ಇತ್ತೀಚೆಗೆ ನಡೆದ ಪಂಚಾಯತು ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರಚಂಡ ಜಯಗಳಿಸಿದ್ದು, ರಾಜ್ಯದ ಉತ್ತರದ ಹಾಗೂ ತೀರಾ ಹಿಂದುಳಿದ ಪ್ರದೇಶವಾದ ಮಂಜೇಶ್ವರ ಬ್ಲೋಕಿನಲ್ಲೂ ಪಕ್ಷವು ಒಂದು ಪಂಚಾಯತನ್ನು ಳಿದು ಮಿಕ್ಕೆಲ್ಲಾ ಪಂಚಾಯತುಗಳಲ್ಲಿ ಪ್ರಾತಿನಿಧ್ಯವನ್ನು ಪಡೆದಿರುತ್ತದೆ. ಮೂರು ಪಂಚಾಯತುಗಳಲ್ಲಿ ಅಧ್ಯಕ್ಷಸ್ಥಾನವನ್ನೂ, ಎರಡು ಪಂಚಾಯತುಗಳಲ್ಲಿ ಉಪಾಧ್ಯಕ್ಷ ಸ್ಥಾನವನ್ನೂ ಗಳಿಸಲು ಶಕ್ತವಾಗಿರುತ್ತದೆ. ಪಕ್ಷದ ವಿಜಯಕ್ಕೆ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೂ, ಮತದಾರರಿಗೂ ಮಂಜೇಶ್ವರ ವಲಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕೃತಜ್ಞತೆಗಳನ್ನು ಸಲ್ಲಿಸಿದೆ. ತನ್ನ ಕಾರ್ಯವ್ಯಾಪ್ತಿಯಲ್ಲಿ ಶುದ್ಧ ಹಾಗೂ ನಿಷ್ಪಕ್ಷಪಾತ ಆಡಳಿತೆಯನ್ನು ನಡೆಸಲು ಎಲ್ಲರ ಸಹಕಾರವನ್ನು ಪಕ್ಷ ಕೋರಿದೆ.

ವಿಜಯಿ ಅಭ್ಯರ್ಥಿಗಳ ವಿವರ :

ಮಂಜೇಶ್ವರ ಪಂಚಾಯತು.

1. ಬಿ. ಯಂ. ರಾಮಯ್ಯಶೆಟ್ಟಿ (ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ) 2. ನಾರಾಯಣ ಟಿ.ಬಂಗೇರ (ಬೆಂಬಲಿತ ಅಭ್ಯರ್ಥಿ) 3. ಯಂ. ವಿಠಲ ನಾಯ್ಕ್ (ಬೆಂಬಲಿತ ಅಭ್ಯರ್ಥಿ)

ವರ್ಕಾಡಿ ಪಂಚಾಯತು.

1. ಕೆ. ಜಾರಪ್ಪಶೆಟ್ಟಿ (ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ) 2. ಕಮಲ ಟೀಚರ್ (ಬೆಂಬಲಿತ ಅಭ್ಯರ್ಥಿ) 3. ಚೋಮ ನಾಯ್ಕ್ 4. ಜಿ. ಎಮ್. ಹಸನ್‌ಕುಂಞ.

ಪೈವಳಿಕೆ ಪಂಚಾಯತು.

1. ಯು. ಕೃಷ್ಣಶೆಟ್ಟಿ (ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ) 2. ಎ. ಅಬೂಬಕ್ಕರ್ 3. ಕಮಲಾ ಎಸ್. ಭಟ್ 4. ಬಿ. ಶಂಕರ ಪಾಟಾಳಿ 5. ಬಾಲಕೃಷ್ಣ ಭಂಡಾರಿ (ಬೆಂಬಲಿತ ಅಭ್ಯರ್ಥಿ-ಅವಿರೋಧ ಆಯ್ಕೆ)

ಮೀಂಜ ಪಂಚಾಯತು.

1. ಯಂ. ನಾರಾಯಣ ಅಡ್ಯಂತಾಯ 2. ಯು. ಸಚ್ಚೀಂದ್ರಶೆಟ್ಟಿ 3. ದೊಡ್ಡ ಪಂಜಿ.

ಉಪ್ಪಳ ಪಂಚಾಯತು

1. ಬಿ. ನಾರಾಯಣಶೆಟ್ಟಿ (ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ)

ಕುಂಬಳೆ ಪಂಚಾಯತು.

1. ಕೆ.ರಾಮಚಂದ್ರಗಟ್ಟಿ (ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ) 2. ಶ್ರೀಮತಿ ರಮಣಿ.

ಪುತ್ತಿಗೆ ಪಂಚಾಯತು.

1. ಬಿ. ಕೆ. ಮಹಮ್ಮದ್ ಮಾಸ್ತರ್ 2. ಪಿ. ಬಿ. ಅಬ್ದುಲ್ಲ 3. ಸುಬ್ಬ ನಾಯ್ಕ್.

ಎಣ್ಮಕಜೆ ಪಂಚಾಯತು.

1. ಕೆ. ಪಿ. ಮದನ ಮಾಸ್ತರ್ (ಅವಿರೋಧ ಆಯ್ಕೆ)

ಕುಂಬ್ಡಾಜೆ ಪಂಚಾಯತು.

1. ಇಂದಿರಾ ರೈ.

ಬೆಳ್ಳೂರ್ ಪಂಚಾಯತು.

1. ತ್ಯಾಂಪಣ್ಣಗೌಡ.

●

ನಿಧನ

ಮಂಜೇಶ್ವರ ಹೊಸಬೆಟ್ಟು ದೊಡ್ಡಮನೆ ಯಜಮಾನ್ ಕೋಚಣ್ಣಶೆಟ್ಟರು 29-9-79 ರಂದು ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ದಿವಂಗತರು ಉದಾರಿಗಳೂ, ರೈತಸಂಘದ ಅಭಿಮಾನಿಗಳೂ ಆಗಿದ್ದರು. ಮೃತರ ಕುಟುಂಬದ ಅಪಾರ ದುಃಖದಲ್ಲಿ ಮಂಜೇಶ್ವರ ಬ್ಲೋಕ್ ರೈತಸಂಘವು ಸಹಭಾಗಿಯಾಗಿರುತ್ತದೆ.

●

ರಾಜ್ಯ ಸರಕಾರದ ನಾಲ್ಕನೇ ದರ್ಜೆ ನೌಕರರ ಮುಷ್ಕರ

ತಮ್ಮ ಬಹಳ ಕಾಲದ 25 ಅಂಶಗಳ ಬೇಡಿಕೆಗಳನ್ನು ಸರಕಾರವು ಇನ್ನೂ ಈಡೇರಿಸದೆ ಇದ್ದಲ್ಲಿ ರಾಜ್ಯ ಸರಕಾರದ ಸುಮಾರು 1.24 ಲಕ್ಷ ನಾಲ್ಕನೇ ದರ್ಜೆ ನೌಕರರು ಮುಂದಿನ ತಿಂಗಳಿನಿಂದ ಮುಷ್ಕರ ಹೂಡಲಿದ್ದಾರೆಂದು ತಿಳಿದು ಬಂದಿದೆ.

ಹಿರಿಯ ಅಧಿಕಾರಿಗಳ ಶೋಷಣೆಯಿಂದ ರಕ್ಷಣೆ, ವೇತನ ಹೆಚ್ಚಳ, ವೈದ್ಯಕೀಯ ಸೌಲಭ್ಯ, ಭಡ್ತಿ ನೀಡಿಕೆ, ವರ್ಗಾವಣೆಗಳ ತಡೆಯುವಿಕೆ, ಖಾಲಿ ಸ್ಥಾನಗಳನ್ನು ತುಂಬುವುದು, ನೌಕರರನ್ನು ಅಧಿಕಾರಿಗಳ ಮನೆಕೆಲಸಗಳಿಗೆ ನೇಮಿಸುವುದನ್ನು ನಿಲ್ಲಿಸುವುದು, ರಾತ್ರಿ ಕೆಲಸದಲ್ಲಿರುವ ವಾಚ್ ಮೇನ್, ಫೋರೆಸ್ಟ್ ಗಾರ್ಡ್ಸ್‌ಗಳಿಗೆ ಒದಗಬಹುದಾದ ಅಪಾಯಗಳಿಂದ ಪಾರಾಗಲು ರಕ್ಷಣಾ ಆಯುಧಗಳನ್ನು ನೀಡುವುದು, ಅಪಾಯ ಭತ್ಯೆ (Risk Allowance) ನೀಡುವುದು ಇವೇ ಮೊದಲಾದುವು ಅವರ ಮುಖ್ಯ ಬೇಡಿಕೆಗಳಾಗಿವೆ.

ಅನಾವೃಷ್ಟಿ ಪೀಡಿತರಿಗೆ ಪರಿಹಾರಕ್ಕೆ ಒತ್ತಾಯ

ಉತ್ತರಕನ್ನಡ ಜಿಲ್ಲೆಯ ಕಿಸಾನ್ ಸಭೆಯ ಕರೆಯ ಮೇರೆಗೆ ಕಾರವಾರ ತಾಲ್ಲೂಕು ಕಿಸಾನ್ ಸಭೆಯು ತಾ. 5-10-79ರಂದು ರೈತರ, ನಿರುದ್ಯೋಗಿಗಳ, ಉಗ್ರಾಣಿ ಜನರ ಮತ್ತು ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಮಾಡಿದ ಸಹಿಸಂಗ್ರಹಣೆಯನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು. ಮನವಿಯಲ್ಲಿ ಭೂಪಂಚಾಯ್ತಿಯಲ್ಲಿ ಚುನಾಯಿತ ರೈತಪ್ರತಿನಿಧಿಗಳನ್ನು ನೇಮಿಸಿಕೊಳ್ಳುವುದು, ರೈತರ ಮೇಲಿದ್ದ ಎಲ್ಲಾ ತರಹದ ಸಾಲದ ಹೊರೆಯನ್ನು ರದ್ದುಪಡಿಸುವುದು, ರೂ. 8 ದಿನಕೂಲಿ ನಿಗದಿಪಡಿಸುವುದು, ಅತಿಕ್ರಮಣ ಮಾಡಿದ ಜಮೀನು ಖಾಯಂಗೊಳಿಸುವುದು, ಲೆವಿ ಭತ್ತದ ಬೆಲೆ ರೂ. 120ಕ್ಕೆ ಏರಿಸುವುದು, ಮಾಧ್ಯಮಿಕ ಶಿಕ್ಷಣದವರೆಗೆ ಪುಕ್ಕಟೆ ಶಿಕ್ಷಣ ದೊರೆಯುವಂತೆ ಮಾಡುವುದು, ಗ್ರಾಮ ಚಾವಡಿಯಲ್ಲಿ ಕೆಲಸ ಮಾಡುವ ಉಗ್ರಾಣಿ ಜನರನ್ನು ಖಾಯಂಗೊಳಿಸಿ ವೇತನ ಹೆಚ್ಚು ಮಾಡುವುದು. ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ಇಲ್ಲವೆ ನಿರುದ್ಯೋಗ ವೇತನ ಕೊಡುವುದು, ಸರಕಾರಿ ಕಛೇರಿಯಲ್ಲಿನ ಲಂಚಗುಳಿತನ ನಿಲ್ಲಿಸುವ ಬಗ್ಗೆ, ಜಮೀನುದಾರರ ಪರವಾಗಿರುವ ನ್ಯಾಯ ತೀರ್ಪುಗಳ ಮರುವಿಚಾರಣೆಯ ಬಗ್ಗೆ, ಈ ವರ್ಷ ಅನಾವೃಷ್ಟಿಯಿಂದ ಉಂಟಾದ ಪರಿಸ್ಥಿತಿಯನ್ನು ನಿವಾರಿಸುವ ಬಗ್ಗೆ ಮುಂತಾದ ವಿಷಯಗಳನ್ನು ಮನವಿಯಲ್ಲಿ ಸೇರಿಸಲಾಗಿತ್ತು.

ಬೆಳಿಗ್ಗೆ ಕಾರವಾರ ತಾಲ್ಲೂಕಿನ ಎಲ್ಲ ಹಳ್ಳಿಗಳಿಂದ ಬಂದ ರೈತ ಪ್ರತಿನಿಧಿಗಳು ಸುಮಾರು 300 ಜನ ಬೆಳಿಗ್ಗೆ 11 ಗಂಟೆಗೆ ಕೋಡಿಬಾಗಿನಲ್ಲಿ ಸೇರಿ ಅಲ್ಲಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆ ಹೊರಟರು. ಕಾಂ. ಎಂ.ಎಸ್. ಧಾರೇಶ್ವರ, ಕಾಂ. ಎನ್.ಜಿ. ಪಾಳಶೇಕರ, ಕಾಂ. ಉಡಚಪ್ಪಾ ಬೊಬಾಟೆ, ಕಾಂ. ಎಂ. ಸಮೀಉಲ್ಲಾ, ಕಾಂ. ಜೀವಾಜಿ ಪುರುಶೋತ್ತಮ ನಾಯಕ್ ಮುಂತಾದವರ ಒಂದು ನಿಯೋಗ, ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್‌ರವರು ರೈತರ ಮನವಿಯನ್ನು ಓದಿ, ನಿಯೋಗ ವಿವರಿಸಿದ ರೈತರ ಸಮಸ್ಯೆಗಳನ್ನು ಸಮಾಧಾನವಾಗಿ ಕೇಳಿ ಸರಕಾರದ ನಜರಿಗೆ ಮೇಲೆ ವಿವರಿಸಿದ ಸಮಸ್ಯೆಗಳನ್ನು ತರುವೆನೆಂದು ಆಶ್ವಾಸನೆ ಕೊಟ್ಟರು.

ನಿಯೋಗ ಹಿಂದಿರುಗಿದ ನಂತರ ಬಹಿರಂಗ ಸಭೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ಎದುರುಗಡೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ರೈತ ಮುಖಂಡರು ಮಾತನಾಡಿದರು.

ಶಿಡ್ಲಘಟ್ಟ ಪುರಸಭೆಯ ಕೌನ್ಸಿಲ್ ಮೀಟಿಂಗಿನಲ್ಲಿ ಗೊಂದಲ

ಶಿಡ್ಲಘಟ್ಟದಲ್ಲಿ ಕಾಲರಾ ಬಗ್ಗೆ ಮುನ್ನೆಚ್ಚರಿಕೆಯನ್ನು ಧ್ವನಿವರ್ಧಕಗಳ ಮೂಲಕ ಸಾರ್ವಜನಿಕರಿಗೆ ತಿಳಿಸಿದ್ದಲ್ಲದೆ, ಚಿತ್ರಮಂದಿರ ಹಾಗೂ ಹೋಟೆಲ್‌ಗಳನ್ನು ಮುಚ್ಚಲಾಗಿತ್ತು.

ಆದರೆ, ಪುರಸಭೆಯ ಆಡಳಿತ ಮಂಡಳಿ ಕಾಲರಾ ಹರಡದಂತೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ಚುನಾಯಿತ ಪ್ರತಿನಿಧಿಗಳು ಸಮಸ್ಯೆಯನ್ನು ಚರ್ಚೆಮಾಡಿ, ಜನಗಳಿಗೆ ಅವಶ್ಯವಿರುವ ಸಹಾಯ ಒದಗಿಸಿ, ಅದರ ಅನುಸಾರ ಯೋಜನೆಯನ್ನು ಕಾರ್ಯಗತಗೊಳಿಸುವ ಬದಲು ಪುರಸಭೆ ಆಡಳಿತ ಮಂಡಳಿ ಸಂಪೂರ್ಣ ನಿಷ್ಕ್ರಿಯವಾಯಿತು.

ಪುರಸಭೆಯವರ ಕರ್ತವ್ಯವನ್ನು ಕುರಿತು ಊರಿನಲ್ಲೆಲ್ಲಾ ಪೋಸ್ಟರುಗಳು ಕಾಣಿಸಿಕೊಂಡ ನಂತರ ಪುರಸಭಾಧ್ಯಕ್ಷರು ಕಣ್ಣುತೆರೆದು ಕೌನ್ಸಿಲ್ ಸಭೆಯನ್ನು ತಾ. 3-10-79ರಂದು ಕರೆದಿದ್ದರು.

ಆ ದಿನ ಬೆಳಿಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿಡ್ಲಘಟ್ಟ ಶಾಖೆ ಕಾರ್ಯದರ್ಶಿ, ಜನರಲ್ ವರ್ಕರ್ಸ್ ಯೂನಿಯನ್ನಿನ ಕಾಯದರ್ಶಿ ಹಾಗೂ ನಾಗರೀಕರು ಸಹಿ ಸಂಗ್ರಹಣೆಯನ್ನು ಒಳಗೊಂಡ ಮನವಿ ಪತ್ರವನ್ನು ಪುರಸಭಾಧ್ಯಕ್ಷರಿಗೆ ನೀಡಿ, ಕಾಲರಾ ತಡೆಗಟ್ಟಲು ಯಾವ ರೀತಿಯ ಮುನ್ನೆಚ್ಚರಿಕೆಯನ್ನೂ ತೆಗೆದುಕೊಳ್ಳದೆ ವಿಫಲರಾಗಿದ್ದೀರಿ, ಅಧಿಕಾರಿಗಳ ಮೇಲೆ ದೂರು ಹೊರಿಸಿ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ನಗರದ ಸ್ವಚ್ಛತೆಯ ಬಗ್ಗೆ ಸ್ವಲ್ಪವೂ ಗಮನ ನೀಡಿಲ್ಲ, ಚಿತ್ರಮಂದಿರಗಳನ್ನು ಮುಚ್ಚಿಸಿದ್ದರೂ, ರೇಷ್ಮೆ ಫಿಲೇಚರ್‌ಗಳಲ್ಲಿ ಕೆಲಸ ನಡೆಯುತ್ತಿರುವುದರಿಂದ ದುರ್ವಾಸನೆ ಹರಡಿಕೊಂಡು, ರೋಗ ಪ್ರಬಲವಾಗಲು ಅವಕಾಶ ನೀಡಿದ್ದೀರಿ, ಸತ್ತಹೆಣಗಳ ಶೇಖರಣೆಗಾಗಿ ಪ್ರತಿದಿನ ಗಾಡಿ ಊರಿನ ಮನೆಗಳ ಮುಂದೆ ನಿಲ್ಲುವುದರಿಂದ ಮನೆಗಳಲ್ಲಾಗಲೀ, ರಸ್ತೆಗಳಲ್ಲಾಗಲೀ ಇರಲು ಸಾಧ್ಯವಿಲ್ಲ, ಕುಡಿಯುವ ನೀರಿನ ಶುದ್ಧೀಕರಣ ಸರಿಯಾಗಿ ಆಗುತ್ತಿಲ್ಲ, ಆದ್ದರಿಂದ ಕೂಡಲೇ ಗಮನ ನೀಡಬೇಕೆಂದು ಒತ್ತಾಯಿಸಲಾಯಿತು. ಜನಗಳ ಭಾರೀ ಒತ್ತಾಯ ಪ್ರತಿಭಟನೆಗಳಿಂದ ಕೂಡಲೇ ಪುರಸಭಾಧ್ಯಕ್ಷರು ಕ್ರಮ ವಹಿಸುವುದಾಗಿ ಆಶ್ವಾಸನೆ ನೀಡಿದರು. ಆದರೂ ನಾಗರೀಕರು ಯಾರೂ ಆವರಣವನ್ನು ಬಿಟ್ಟು ಚದರಲಿಲ್ಲ.

ಕೌನ್ಸಿಲ್ ಸಭೆಯಲ್ಲಿ ಆಡಳಿತ ಪಕ್ಷ ಹಾಗೂ ವಿರೋಧಿ ಸದಸ್ಯರ ನಡುವೆ ಬಿಸಿ ಬಿಸಿ ವಾಗ್ವಾದ ನಡೆದು ಕೈ ಮಿಲಾಯಿಸುವ ಘಟ್ಟಕ್ಕೆ ಹೋದಾಗ, ನಾಗರೀಕರು ಮಧ್ಯೆ ಪ್ರವೇಶಿಸಬೇಕಾಯಿತು. ಕೂಗು, ಪ್ರಶ್ನೆಗಳು ಎಲ್ಲೆಲ್ಲೂ ಕೇಳಿಬರುತ್ತಿದ್ದವು. ಕಾಂ. ಜೆ. ದೊರೆಸ್ವಾಮಿಯವರು ಕೌನ್ಸಿಲ್ ಮೀಟಿಂಗಿನಲ್ಲಿ ಆಡಳಿತ ಪಕ್ಷದವರು ತಮ್ಮ ಜವಾಬ್ದಾರಿಯನ್ನು ಕೇವಲ ಹೆಲ್ತ್ ಇನ್ಸ್‌ಪೆಕ್ಟರ್‌ಗಳ ಮೇಲೆ ಹಾಕಿರುವುದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.

ಸಹಕಾರಿ ಸಂಘದ ಪದಾಧಿಕಾರಿಗಳ ಆಯ್ಕೆ

ಕೆನರಾ ವರ್ಕ್‌ಶೋಪಿನ ಕೆಲಸಗಾರರ ಸಹಕಾರಿ ಸಂಘದ ಡೈರೆಕ್ಟರರ ಮಂಡಳಿಯ ಪ್ರಥಮ ಸಭೆಯು ತಾ. 6-10-1979ನೇ ಶನಿವಾರದಂದು ಶ್ರೀಯುತ ಕೆ. ಶಂಕರ ಕದ್ರಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

1979-80ರ ಸಾಲಿಗೆ ಸರ್ವಶ್ರೀಗಳಾದ ಎಸ್. ವಿ. ಕುಡ್ವಾ (ಎಕ್ಸೋಫೀಸ್ ಪ್ರೆಸಿಡೆಂಟ್) ಕೆ. ಸದಾನಂದ (ಉಪಾಧ್ಯಕ್ಷ) ಸಿ. ನಾರಾಯಣ (ಕಾರ್ಯದರ್ಶಿ) ಹಾಗೂ ಬಿ. ಬಾಬು ಉಪಕಾರ್ಯದರ್ಶಿಯಾಗಿ ಸಂಘದ ಅಧಿಕಾರವರ್ಗಕ್ಕೆ ಆಯ್ಕೆ ಮಾಡಲಾಯಿತು.

ಮಾಜಿ ಡೈರೆಕ್ಟರರುಗಳಾದ ಶ್ರೀಯುತ ಗಾಬ್ರಿಯೇಲ್ ಬಂಗೇರ, ಎ. ಕಾಂತಪ್ಪ, ಯು. ನಾರಾಯಣ ಹಾಗೂ ಕೆ. ರಾಘವಶೆಟ್ಟಿ ಇವರುಗಳು ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಹೃತ್ಪೂರ್ವಕ ವಿದಾಯ ಸತ್ಕಾರವನ್ನು ಏರ್ಪಡಿಸಲಾಯ್ತು.

ಸಂಘದ ಅಭಿವೃದ್ಧಿಗಾಗಿ ಹಲವಾರು ಉತ್ತಮ ಸೂಚನೆಗಳೊಂದಿಗೆ ತಮ್ಮಿಂದಾದ ಸಹಕಾರವನ್ನು ನೀಡುವ ಭರವಸೆಯನ್ನು ಮಾಜಿ ಡೈರೆಕ್ಟರರು ಇತ್ತುದನ್ನು ಸ್ಮರಿಸಿ ಅಧ್ಯಕ್ಷ ಶ್ರೀಯುತ ಶಂಕರ ಕದ್ರಿಯವರು ಮಾತನಾಡುತ್ತಾ ಮುಂದಕ್ಕೂ ಸಂಘವು ಪ್ರಗತಿ ಪಥದಲ್ಲಿ ಮುನ್ನಡೆಯುವಲ್ಲಿ ಜನರಲ್ಲಿ ಸಹಕಾರ ನೀತಿ, ಒಗ್ಗಟ್ಟು ಹಾಗೂ ನಿಸ್ವಾರ್ಥ ಸೇವೆಯನ್ನು ಮನವರಿಕೆ ಮಾಡುತ್ತಾ ಹೊಸದಾಗಿ ಆರಿಸಿ ಬಂದ ಡೈರೆಕ್ಟರರಿಗೆ ಸ್ವಾಗತ ಬಯಸಿ ಮಾಜಿ ಡೈರೆಕ್ಟರುಗಳಿಗೆ ಅಭಿನಂದಿಸುತ್ತಾ ವಿದಾಯ ಕೋರಿದರು.

ಕೊನೆಗೆ ಕಾರ್ಯದರ್ಶಿ ಸಿ. ನಾರಾಯಣರವರು ಧನ್ಯವಾದಗಳನ್ನಿತ್ತರು.

ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಭೂ ಆಕ್ರಮಣ ಚಳುವಳಿ

ಕೋಲಾರ ಜಿಲ್ಲಾ ರೈತಸಂಘ ನೀಡಿರುವ ಕರೆಯಂತೆ, ಶಿಡ್ಲಘಟ್ಟ ತಾಲ್ಲೂಕು ಕಸಬಾ ಹೋಬಳಿ, ಕೆಂಪನಹಳ್ಳಿ ಗ್ರಾಮದ ಕೃಷಿ ಕೂಲಿಗಾರರು ಅಕ್ಟೋಬರ್ 6 ಮತ್ತು 7 ರಂದು ಸರ್ವೆ ನಂಬರ್ 31ರ ಸರ್ಕಾರಿ ಬಂಜರು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಮುವತ್ತು ಎಕರೆ ಸರಿ ಜಮೀನನ್ನು ಉಳುಮೆ ಮಾಡಿ, ಹುರುಳಿ ಬಿತ್ತನೆ ಸಹಾ ಮಾಡಿರುತ್ತಾರೆ. ಈ ಭೂಆಕ್ರಮಣ ಚಳುವಳಿಯ ನಾಯಕತ್ವವನ್ನು ಕಾಂ. ಕೆ. ಸಾದಪ್ಪನವರು ವಹಿಸಿದ್ದರು.

ತಿಮ್ಮಸಂದ್ರ, ಕುಂದಲಗುರ್ಕಿ, ಮಳ್ಳೂರು ಮುಂತಾದ ಗ್ರಾಮಗಳಲ್ಲಿ ಭೂ ಆಕ್ರಮಣ ಚಳುವಳಿಗೆ ಸಿದ್ಧತೆಗಳು ನಡೆಯುತ್ತಿರುವುದಾಗಿ ತಾಲ್ಲೂಕು ಸಿ. ಪಿ. ಐ. (ಎಂ) ಕಾರ್ಯದರ್ಶಿಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂ. ಕೆ. ಎಸ್. ವಾಸನ್‌ರವರಿಗೆ ಶ್ರದ್ಧಾಂಜಲಿ

ಕಾಂ.ಕೆ.ಎಸ್.ವಾಸನ್ ತಮ್ಮ ತಾರುಣ್ಯದಲ್ಲಿಯೇ ಕೋಲಾರ ಚಿನ್ನದ ಗಣಿ ಕಾರ್ಮಿಕರ ಸಂಘಟನೆಯಲ್ಲಿ ತಮ್ಮ ದುಡಿಮೆಯನ್ನು ಪ್ರಾರಂಭಿಸಿದರು 1939ರಿಂದ ಚಿನ್ನದ ಗಣಿ ಕಾರ್ಮಿಕರ ಅನೇಕ ಹೋರಾಟಗಳ ನಾಯಕತ್ವ ವಹಿಸಿದ್ದರು. ಅವರು ಮೈಸೂರು ಮೈನ್ ವರ್ಕರ್ಸ್ ಯೂನಿಯನ್ನಿನ ಪದಾಧಿಕಾರಿಯಾಗಿ ಕೆ.ಪಿ.ಟಿ.ಯು.ಸಿ. ಅಧ್ಯಕ್ಷ ಪದವಿಗೇರಿದರು. 1970ರ ಮೇ ನಲ್ಲಿ ಕಲ್ಕತ್ತದಲ್ಲಿ ನಡೆದ ಸಿ.ಐ.ಟಿ.ಯು. ಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಿ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸದಸ್ಯರಾಗಿ ಚುನಾಯಿತರಾದರು.

1956ರಲ್ಲಿ ಸ್ಥಾಪನೆಯಾದ ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ (ಚಿಕ್ಕಮಗಳೂರು) ಅಧ್ಯಕ್ಷರಾಗಿದ್ದರು.

1952ರಲ್ಲಿ ನಡೆದ ಚುನಾವಣೆಯಲ್ಲಿ ಅವರು ಕೆ.ಜಿ.ಎಫ್. ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾಗಿ ಮೈಸೂರಿನ ಪ್ರಥಮ ಕಮ್ಯುನಿಸ್ಟ್ ಎಂ.ಎಲ್.ಎ. ಆದರು.

ಹೃದ್ರೋಗದಿಂದ ನರಳುತ್ತಿದ್ದ ಅವರು 14-10-79ರಂದು ಬೆಂಗಳೂರಿನ ಚಿನ್ಮಯಾನಂದ ನರ್ಸಿಂಗ್ ಹೋಂನಲ್ಲಿ ನಿಧನರಾದರು.

ಕಾಂ. ಕೆ.ಎಸ್. ವಾಸನ್‌ರವರಿಗೆ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯು ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮ್ಮೇಳನ

ದಿನಾಂಕ 14-10-1979 ರಂದು ಬೆಳಗ್ಗೆ 11ರಿಂದ ಸಂಜೆ 6ರವರೆಗೆ ಬೆಂಗಳೂರಿನ ಸಿ. ಐ. ಟಿ. ಯು. ಜಿಲ್ಲಾ ಸಮ್ಮೇಳನ ಬೆಂಗಳೂರಿನ ದೇವಾಂಗ ಸಂಘದಲ್ಲಿ ಶ್ರೀ ಜಿ. ಎಸ್. ಅನಂತರಾಮ್, ಕಾಂ. ಶ್ರೀನಿವಾಸ್ ಆರ್, ಕಾಂ. ಬಾನು, ಕಾಂ. ಜಿ. ರಾಮು, ಕಾಂ. ಸುಬ್ರಮಣಿಯವರ ಅಧ್ಯಕ್ಷ ಮಂಡಳಿಯ ನೇತೃತ್ವದಲ್ಲಿ ನಡೆಯಿತು.

ಪ್ರಾರಂಭದಲ್ಲಿ ಶ್ರೀನಿವಾಸ್ ಎಲ್ಲರನ್ನೂ ಸ್ವಾಗತಿಸಿದರು. ಇದಾದನಂತರ ಕರ್ನಾಟಕ ರಾಜ್ಯದ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಸಮ್ಮೇಳನವನ್ನು ಉದ್ಘಾಟನೆ ಮಾಡಿದರು.

ಆನಂತರ ಕಾಂ. ಸಿ. ನಂಜುಂಡಪ್ಪ (ಕರ್ನಾಟಕ ರಾಜ್ಯದ ಸಿ ಐ ಟಿ ಯು ಪ್ರಧಾನ ಕಾರ್ಯದರ್ಶಿ)ರವರು ಸಿ. ಐ. ಟಿ. ಯು. ಧ್ಯೇಯ ಧೋರಣೆಗಳನ್ನು ವಿವರಿಸಿದರು. ಕಾಂ. ಅನಂತರಾಮ್ ವರದಿ ಸಲ್ಲಿಸಿದರು. ವರದಿಯ ಮೇಲೆ ನಡೆದ ಚರ್ಚೆಯಲ್ಲಿ 20 ಜನಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನಕ್ಕೆ ಸುಮಾರು 200 ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಕೆಳಕಂಡ ನಿರ್ಣಯಗಳನ್ನು ಸಮ್ಮೇಳನದಲ್ಲಿ ತೆಗೆದುಕೊಳ್ಳಲಾಯಿತು :

1. ಮೈಕೋ ಕಾರ್ಮಿಕರ ಹೋರಾಟ :

ಬೆಂಗಳೂರಿನಲ್ಲಿ ನಡೆಯುತ್ತಿರುವ ಮೈಕೋ ಕಾರ್ಮಿಕರ ಮುಷ್ಕರಕ್ಕೆ ಸಮ್ಮೇಳನ ಎಲ್ಲ ರೀತಿಯ ಬೆಂಬಲ ವ್ಯಕ್ತಪಡಿಸಿತು. ಸರ್ಕಾರ ಕಾರ್ಮಿಕರ ಕೇಳಿಕೆಗಳನ್ನು ಬಗೆಹರಿಸುವುದಕ್ಕೆ ಬದಲು ಪೋಲೀಸ್ ಕಮೀಷನರ್‌ರವರ ಮೂಲಕ 35ನೇ ಸೆಕ್ಷನ್ ಜಾರಿ ಮಾಡಿಸಿರುವುದನ್ನು ಸಮ್ಮೇಳನ ಉಗ್ರವಾಗಿ ಖಂಡಿಸಿತು. ಕಾರ್ಮಿಕರಿಗೆ ಬೆಂಬಲಕೊಡುವ ಸಲುವಾಗಿ ಸಿ. ಐ. ಟಿ. ಯು. ಗೆ ಸೇರಿದ ಎಲ್ಲ ಸಂಘ ಸಂಸ್ಥೆಗಳಿಂದ 1 ದಿನ ಸಾಂಕೇತಿಕ ಮುಷ್ಕರ ಆಚರಿಸಬೇಕೆಂದು ತೀರ್ಮಾನ ತೆಗೆದುಕೊಂಡಿತು.

2. ವಿದ್ಯುಚ್ಛಕ್ತಿ ಖೋತಾ ಬಗ್ಗೆ:

ಕರ್ನಾಟಕದ ಅನೇಕ ಕಾರ್ಖಾನೆಗಳಿಗೆ ಕರ್ನಾಟಕ ಸರ್ಕಾರ ವಿದ್ಯುಚ್ಛಕ್ತಿಯನ್ನು ಖೋತಾ ಮಾಡಿರುವುದರಿಂದ ಅನೇಕ ಕಾರ್ಖಾನೆಗಳು ಲೇ-ಆಫ್ ಆಗಿದ್ದು ಅನೇಕ ಕಾರ್ಮಿಕರಿಗೆ ತೊಂದರೆಯಾಗಿದೆ. ಈ ರೀತಿಯಾಗಿ ವಿದ್ಯುಚ್ಛಕ್ತಿ ಅಭಾವ ಆಗಲು ಕಾರಣವೇನೆಂದರೆ ಕೇವಲ ಹೈಡ್ರೊ ಎಲೆಕ್ಟ್ರಿಕ್ ಪವರ್ ಮೇಲೆ ಅವಲಂಬನೆಯಾದದ್ದು ಮತ್ತು ಸರಿಯಾದ ಯೋಜನೆ ಇಲ್ಲದೆ ಇರುವುದು.

ಈ ಸಮ್ಮೇಳನ ಸರ್ಕಾರಕ್ಕೆ ವಿದ್ಯುಚ್ಛಕ್ತಿ ಖೋತಾ ಮಾಡುವುದನ್ನು ತಪ್ಪಿಸಲು ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ಒತ್ತಾಯಿಸುವುದಲ್ಲದೆ ಟೆಕ್ಸ್‌ಟೈಲ್ ಕೆಲಸಗಾರರಿಗೆ ಇದು ಅನ್ವಯಿಸದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸುತ್ತದೆ.

3. ದಾಂಡೇಲಿ ಎಲೆಕ್ಟ್ರೋಮೆಟಲರ್ಜಿಕಲ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ:

ದಾಂಡೇಲಿ ಎಲೆಕ್ಟ್ರೋಮೆಟಲರ್ಜಿಕಲ್ ಕಾರ್ಮಿಕರು ಕೆಲವು ಬೇಡಿಕೆಗಳನ್ನಿಟ್ಟು ಹೋರಾಟ ಮಾಡುತ್ತಿದ್ದಾರೆ. ಆದರೆ, ಆಡಳಿತವರ್ಗ 23-6-79ರಿಂದ ಬೀಗಮುದ್ರೆಯನ್ನು ಘೋಷಿಸಿದೆ. ಇಷ್ಟೇ ಅಲ್ಲದೆ ಸರ್ಕಾರ ಕಾರ್ಮಿಕ ಮುಖಂಡರ ಮೇಲೆ ಅನೇಕ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದಾರೆ ಮತ್ತು ಕೆಲವರಿಗೆ ಗಡೀಪಾರು ಆಜ್ಞೆ ಹೊರಡಿಸಿದ್ದಾರೆ.

ಸರ್ಕಾರ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದೂ ಅಕ್ರಮಬೀಗಮುದ್ರೆಯನ್ನು ಕೂಡಲೇ ತೆಗೆದು ಎಲ್ಲಾ ಕೆಲಸಗಾರರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವಂತೆ ಈ ಸಮ್ಮೇಳನ ಒತ್ತಾಯಿಸುತ್ತದೆ.

4. ಬೆಂಗಳೂರು ದಕ್ಷಿಣ ತಾಲ್ಲೋಕ್ ತಾತಗುಣಿ ಎಸ್ಟೇಟಿನಲ್ಲಿ ರೋರಿಚ್ ಮತ್ತು ದೇವಿಕಾರಾಣಿಯವರು ಕಾರ್ಮಿಕರನ್ನು ಅನ್ಯಾಯವಾಗಿ ಕೆಲಸದಿಂದ ತೆಗೆದುಹಾಕಿರುವುದನ್ನು ಸಮ್ಮೇಳನ ಖಂಡಿಸಿ ಆ ಕಾರ್ಮಿಕರ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿದೆ. ಸರ್ಕಾರ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

5. ಬೆಂಗಳೂರಿನಲ್ಲಿ ಹೋಟೆಲ್ ಕಾರ್ಮಿಕರ ಹೋರಾಟ :

ಸರ್ಕಾರ 2 ತಿಂಗಳ ಹಿಂದೆ ಹೋಟೆಲ್ ಕಾರ್ಮಿಕರ ಹಿತರಕ್ಷಣೆಗಾಗಿ ಒಂದು ತ್ರಿಪಕ್ಷೀಯ ಸಮಿತಿಯನ್ನು ರಚಿಸುವುದಾಗಿ ಭರವಸೆಕೊಟ್ಟು ಇದುವರೆಗೂ ಸಮಿತಿಯನ್ನು ರಚಿಸದೆ ಇರುವುದನ್ನು ಉಗ್ರವಾಗಿ ಖಂಡಿಸಿತು. ಕೂಡಲೇ ತ್ರಿಪಕ್ಷೀಯ ಸಮಿತಿಯನ್ನು ರಚಿಸಬೇಕೆಂದು ಸರ್ಕಾರವನ್ನು ಈ ಸಮ್ಮೇಳನ ಒತ್ತಾಯಿಸುತ್ತದೆ.

6. ಅವ್ಯವಸ್ಥೆಯಿಂದ ನಡೆಯುತ್ತಿರುವ ಆಟೋರಿಕ್ಷಾ ಉದ್ಯಮವನ್ನು ಒಂದು ವ್ಯವಸ್ಥೆಯಿಂದ ನಡೆಸಲು ಸರ್ಕಾರ ಒಂದು ಸಲಹಾ ಮಂಡಳಿಯನ್ನು ರಚಿಸಬೇಕೆಂದು ಈ ಸಮ್ಮೇಳನ ಒತ್ತಾಯಿಸಿತು.

7. ಟೊರಿನೋ ಕಾರ್ಮಿಕರ ಹೋರಾಟ, ಡೆಲೀಸಿಯಾ ಕಾರ್ಮಿಕರ ಹೋರಾಟ, ಕರ್ನಾಟಕ ಸ್ಟೀಲ್ ಅಂಡ್ ವೈರ್ ಪ್ರಾಡಕ್ಟ್ಸ ಕಾರ್ಮಿಕರ ಹೋರಾಟ, ಹೆಚ್. ಎ. ಎಲ್. ಅಧಿಕಾರಿಗಳನ್ನು ಮತ್ತೆ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂಬುದನ್ನು ಬೆಂಬಲಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಸಮಿತಿ ರಚನೆ :

1. ಕಾಂ. ಎನ್. ಎಲ್. ಉಪಾಧ್ಯಾಯ ಅಧ್ಯಕ್ಷರು 2. ಕಾಂ. ಜಿ. ರಾಮು, ಕಾಂ. ಬಾನು ಉಪಾಧ್ಯಕ್ಷರು 3. ಕಾಂ. ಜಿ. ಎಸ್. ಅನಂತರಾಮ್ ಕಾರ್ಯದರ್ಶಿ 4. ಕಾಂ. ಕುಲಕರ್ಣಿ, ಕಾಂ. ಶ್ರೀನಿವಾಸ್, ಸಹಕಾರ್ಯದರ್ಶಿಗಳು 5. ಕಾಂ. ಸುಬ್ರಮಣಿ ಖಜಾಂಚಿ

ಸಿ. ಐ. ಟಿ. ಯು. (ಕರ್ನಾಟಕ ರಾಜ್ಯ) ವಿನ ಕಾರ್ಯದರ್ಶಿ ವಿ. ಜೆ. ಕೆ. ನಾಯರ್ ಮುಕ್ತಾಯ ಭಾಷಣ ಮಾಡಿದರು.

●

ರೈತರಿಗೆ ಕಿರುಕುಳ ತಪ್ಪಿಸಲು ಸರಕಾರಕ್ಕೆ ಒತ್ತಾಯ

ದ. ಕ. ಜಿಲ್ಲೆಯ ಮಂಗಳೂರು ತಾಲ್ಲೂಕಿನ ರೈತಸಂಘದ ಪ್ರತಿನಿಧಿಗಳ ಸಭೆಯು ತಾ. 14-10-79 ರಂದು ತೊಕ್ಕೊಟಿನಲ್ಲಿ ಕಾಂ. ಶಾಮಣ್ಣ ರೈಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾಂ. ಯು. ಜನಾರ್ಧನ ನಾಯಕರು ತಾಲ್ಲೂಕು ರೈತಸಂಘದ ವರದಿ ನೀಡಿದರು ಬಳಿಕ, ತಾಲ್ಲೂಕಿನಲ್ಲಿ ರೈತಸಂಘವನ್ನು ಸುಸಂಘಟಿತವಾಗಿ ಕಟ್ಟಲು ಕಾಂ. ಕೆ. ಆರ್. ಶ್ರೀಯಾನ್, ಕಾಂ. ಕೆ. ಪಿ. ಸಾಲ್ಯಾನ್, ಕೆ. ರಾಮನಾಯಕ್, ಜೆ. ಕೃಷ್ಣಪ್ಪ, ಡಿ. ಗೋಪಾಲ, ಎಮ್. ಎಸ್. ನಾರಾಯಣ, ಹಾಗೂ ಹೊನ್ನಯ್ಯ ದೇವಾಡಿಗ ಮಾತನಾಡಿದರು.

ನಂತರ, ಮಂಗಳೂರು ತಾಲ್ಲೂಕು ರೈತಸಂಘದ ಸಮಿತಿಯನ್ನು ರಚಿಸಲಾಯಿತು. ಕಾಂ. ಕೆ. ಆರ್. ಶ್ರೀಯಾನ್ ಅಧ್ಯಕ್ಷರಾಗಿಯೂ, ಜೆ. ಕೃಷ್ಣಪ್ಪ-ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಇದಲ್ಲದೆ ಮೂವತ್ತು ಜನರ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

ದ. ಕ. ಜಿಲ್ಲೆಯಲ್ಲಿ ಸಂಭವಿಸಿದ ನೆರೆಹಾವಳಿಯಿಂದಾಗಿ ಜನಗಳು ತುಂಬಾ ಕಷ್ಟಕ್ಕೆ ಒಳಗಾಗಿದ್ದಾರೆ. ಮನೆ, ಮಾರು ಕಳೆದುಕೊಂಡ ಜನರಿಗೆ ಸರಕಾರ ಕೊಟ್ಟ ಸಾಲವನ್ನು ವಸೂಲು ಮಾಡಲು, ಸರಕಾರಿ ಅಧಿಕಾರಿಗಳು ಮನೆ ಜಫ್ತು ಮಾಡುವುದು ಮುಂತಾದ ಕ್ರಮಗಳನ್ನು ತೆಗೆದುಕೊಂಡಿರುವುದನ್ನು ಸಭೆ ಖಂಡಿಸಿತು.

ಇಡೀ ಜಿಲ್ಲೆಯಲ್ಲಿ, ತೆಂಗಿನ ಮರದ ಗರಿಗಳಿಗೆ ರೋಗತಗುಲಿ ರೈತರು ನಷ್ಟಕ್ಕೆ ಒಳಗಾಗುತ್ತಿರುವುದನ್ನು ತಪ್ಪಿಸಲು, ಸರಕಾರ ಸಾಮೂಹಿಕವಾಗಿ ತೆಂಗಿನ ಮರಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

○

ಬೀಡಿ ಮಜೂರರ ಸಭೆ

ಬಂಟ್ವಾಳ ತಾಲ್ಲೂಕು ಮಣಿನಾಲ್ಕೂರು ಗ್ರಾಮದಲ್ಲಿ ಬೀಡಿಮಜೂರರ ಸಭೆಯು ತಾ. 14-10-1979 ರಂದು ಕಾಂ. ಬಿ. ರುಕ್ಮಯ್ಯ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಕಾಂ. ಕೂಸಪ್ಪಗಟ್ಟಿಯವರು ಸ್ವಾಗತಿಸಿದರು. ಬೀಡಿ ಮಜೂರರು ಯಾಕೆ ಸಂಘಟಿತರಾಗಿ ಹೋರಾಟ ಮಾಡಬೇಕು, ಹೋರಾಟ ನಡೆಸದೆ ಇರುವ ಬಹುಸಂಖ್ಯಾತ ಬೀಡಿ ಮಜೂರರ ಪಾಡೇನು ಎಂಬವುದನ್ನು ವಿವರಿಸಿದರು. ಬಳಿಕ ಪುತ್ತುಪೂಜಾರಿ, ಅಧ್ಯಕ್ಷ, ಕುಂತಬ್ಬಾರಿ ಉಪಾಧ್ಯಕ್ಷ, ವಿಶ್ವನಾಥಶೆಟ್ಟಿ ಕಾರ್ಯದರ್ಶಿ, ನಾರಾಯಣ ನಾಯ್ಕ ಜತೆ ಕಾರ್ಯದರ್ಶಿಯಾಗಿರುವ ಹದಿಮೂರು ಜನ ಬೀಡಿ ಮಜೂರರ ಸಮಿತಿಯನ್ನು ರಚಿಸಲಾಯಿತು. ಗ್ರಿಕೇಸ್‌ರವರು ಧನ್ಯವಾದವಿತ್ತಬಳಿಕ ಸಭೆ ಮುಕ್ತಾಯವಾಯಿತು.

ಬೆಂಬಲ

ಕರ್ನಾಟಕದಲಿ ಮೊದಲ ಬಾರಿಗೆ ಕೇಂದ್ರ ಕಿಸಾನ್ ಸಮಿತಿ ಸಭೆ ಅಕ್ಟೋಬರ್ 26ರಿಂದ 28ರವರೆಗೆ ನಡೆಯಲಿದೆ ಇದೇ ವೇಳೆಗೆ ಬೆಂಗಳೂರು ಜಿಲ್ಲಾ ರೈತಸಂಘದ ಸಮ್ಮೇಳನ ಕೂಡಾ ನಡೆಯುತ್ತಿರುವುದನ್ನು ಕೃಷ್ಣರಾಜಪುರ ಶಾಖೆ ಸಿ ಐ. ಟಿ. ಯು. ಮುಖಂಡ ಕಾಂ. ನಾರಾಯಣರಾವ್, ಬಾನು ಹಾಗೂ ಸದಸ್ಯರು ಸ್ವಾಗತಿಸಿದ್ದಾರೆ. ಕೇಂದ್ರ ಸಮಿತಿ ಸಭೆ ಹಾಗೂ ಸಮ್ಮೇಳನಕ್ಕೆ ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಮೈಕೋ ಕಾರ್ಮಿಕರ ಮುಷ್ಕರಕ್ಕೆ ಸಹ ಬೆಂಬಲ ವ್ಯಕ್ತಪಡಿಸಲಾಗಿದ್ದು, ಸರಕಾರ ಕೂಡಲೇ ಮಧ್ಯೆ ಪ್ರವೇಶಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕೆಂದು ಕೋರಿದ್ದಾರೆ.

●

ಮೈಸೂರಿನಲ್ಲಿ ಹೋಟೆಲ್ ಕಾರ್ಮಿಕರ ಮುಷ್ಕರ

ದಾಸ್‌ಪ್ರಕಾಶ್ ಹೋಟೆಲ್ ಕೆಲಸಗಾರರ ಹೋರಾಟವು 13ನೇ ದಿನಕ್ಕೆ ಕಾಲಿಟ್ಟರೂ ಸಹ ಕಾರ್ಮಿಕ ಇಲಾಖೆಯವರು ಮಧ್ಯೆ ಪ್ರವೇಶಿಸಿ, ಒತ್ತಾಯ ತಂದು ಸಮಸ್ಯೆಯನ್ನು ಬಗೆಹರಿಸಿಲ್ಲ. ಹೋಟೆಲ್ ಮಾಲೀಕರು ಕೆಲಸಗಾರರಿಗೆ ದುಡಿದ ವೇತನವನ್ನು ಕೊಡದೆ ಇದ್ದು ಇದರ ಬಗ್ಗೆ ಕಾರ್ಮಿಕ ಇಲಾಖೆಗೆ ದೂರಿತ್ತಿದ್ದರೂ ಕೂಡ, ಕೆಲಸಗಾರರಿಗೆ ದುಡಿದ ವೇತನವನ್ನು ಕೊಡಿಸಿಲ್ಲ. ಇವುಗಳ ವಿರುದ್ಧ ಪ್ರತಿಭಟಿಸಿ ಹಾಗೂ ವಜಾ ಮಾಡಿದ ಕೆಲಸಗಾರರನ್ನು ಹಿಂದಕ್ಕೆ ತೆಗೆದುಕೊಂಡು, ಬೀಗಮುದ್ರೆಯನ್ನು ತೆಗೆಯುವಂತೆ ಒತ್ತಾಯಿಸಲು ತಾ. 17-10-1979ರಂದು ನಗರದ ಎಲ್ಲಾ ಹೋಟೆಲ್ ಕೆಲಸಗಾರರು ಕಾರ್ಮಿಕ ಇಲಾಖೆಯ ಕಛೇರಿಯ ಮುಂದೆ ಧರಣಿ ನಡೆಸಿದರು. ಅದೇ ದಿವಸ ಸಂಜೆ 9 ಗಂಟೆಗೆ ಭಾರಿ ಪಂಜಿನ ಮೆರವಣಿಗೆಯನ್ನು ನಡೆಸಿದರು.

○

ಶಿಡ್ಲಘಟ್ಟದಲ್ಲಿ ಜೆ. ಪಿ. ಸಂತಾಪ ಸೂಚಕ ಸಭೆ

ತಾ. 9-10-79 ರಂದು ಶಿಡ್ಲಘಟ್ಟದ ನಾಗರೀಕರು, ಟೌನ್ ಸಹಕಾರಿ ಸಂಘದ ಕಟ್ಟಡದಲ್ಲಿ ಸಭೆ ಸೇರಿ ಅಗಲಿದ ಜೆ. ಪಿ. ಗೆ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕಾಶೀನಾಥ ಶಾಸ್ತ್ರಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಕಾಂ. ದೊರೆಸ್ವಾಮಿ. ವಿಜಯ ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟ್ ಪ್ರಿನ್ಸಿಪಾಲ್ ಹಾಗೂ ಪುರಸಭಾ ಸದಸ್ಯರಾದ ಶ್ರೀ ಎ. ಆರ್. ಮುನಿರತ್ನಂ ಮತ್ತು ಶ್ರೀ ಎಸ್. ವಿ. ಅಯ್ಯರ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಜೆ. ಪಿ. ಯವರಿಗೆ ನಾವು ಸಲ್ಲಿಸುವ ಶ್ರದ್ಧಾಂಜಲಿಯೆಂದರೆ ಸರ್ವಾಧಿಕಾರಿಶಕ್ತಿಗಳು ಮತ್ತೆ ಈ ದೇಶದಲ್ಲಿ ತಲೆ ಎತ್ತದಂತೆ ಮಾಡುವುದು ಎಂದರು. ಎರಡು ನಿಮಿಷಗಳ ಮೌನ ಆಚರಣೆ ನಂತರ ಸಭೆ ಮುಕ್ತಾಯವಾಯಿತು.

●

ಮೈಸೂರಿನಲ್ಲಿ ಪಕ್ಷದ ಸಭೆ

ಮೈಸೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕಛೇರಿಯಲ್ಲಿ ಪಾರ್ಟಿ ಸದಸ್ಯರ ಮತ್ತು ಹಿತೈಷಿಗಳ ಸಭೆ ತಾ. 7-10-79 ರಂದು ಜರುಗಿತು. ಸಭೆಗೆ ರಾಜ್ಯಸಮಿತಿಯ ಸೆಕ್ರೆಟೇರಿಯಟ್ ಸದಸ್ಯರಾದ ಕಾಂ. ಎನ್. ಎಲ್. ಉಪಾಧ್ಯಾಯರು ಇಂದಿನ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಪಾರ್ಟಿಯು ಕೈಗೊಂಡ ನಿಲುವೆಯನ್ನು ಸುದೀರ್ಘವಾಗಿ ವಿವರಿಸಿ ಪಾರ್ಟಿಯ ಕರ್ತವ್ಯವೇನೆಂಬುದನ್ನು ತಿಳಿಯಹೇಳಿದರು.

ಪಾರ್ಟಿಯನ್ನು ಬೆಳೆಸಲು ಮತ್ತು ಮುಂಬರುವ ಚುನಾವಣೆಗೂ ನಿಧಿ ಸಂಗ್ರಹಿಸಬೇಕೆಂದು ವಿನಂತಿಸಿದರು.

ಕಾಂ. ಎಂ. ಎನ್. ಉಗ್ರಪ್ಪನವರು ಸಭಿಕರನ್ನುದ್ದೇಶಿಸಿ ಸ್ಥಳೀಯ ಪರಿಸ್ಥಿತಿ, ಮತ್ತು ಹೋರಾಟಗಳ ಬಗ್ಗೆ ಮಾತನಾಡಿ ಪಾರ್ಟಿಯನ್ನು ಬೆಳೆಸಲು ಎಲ್ಲ ರೀತಿಯ ಬೆಂಬಲ ಮತ್ತು ಸಹಕಾರಗಳನ್ನು ನೀಡಬೇಕೆಂದು ಕೇಳಿ ಆಗಮಿಸಿದ್ದವರೆಲ್ಲರಿಗೂ ಧನ್ಯವಾದಗಳನ್ನು ಹೇಳಿದರು. ○

ವಾರ್ಷಿಕ ಮಹಾ ಸಭೆ

ಸೌತ್‌ಕೆನರಾ ಟ್ರಾಲ್ ವರ್ಕರ್ಸ್ ಯೂನಿಯನ್ನಿನ 36ನೇ ವಾರ್ಷಿಕ ಮಹಾ ಸಭೆಯು ಸಂಘದ ಅಧ್ಯಕ್ಷ ಕಾಂ. ಪಿ. ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. 7-10-1979ನೇ ಆದಿತ್ಯವಾರ ಸಂಘದ ಬೋಳಾರ ಆಫೀಸಿನಲ್ಲಿ ಜರಗಿತು.

ಮೃತರಿಗೆ ಶ್ರದ್ಧಾಂಜಲಿಯರ್ಪಿಸುವ ಕಾರ್ಯಕ್ರಮದ ನಂತರ, ಪ್ರಧಾನ ಕಾರ್ಯದರ್ಶಿ ಕಾಂ. ಬಿ. ಕೊರಗಪ್ಪರೈಯವರು ಸಂಘದ ಚಟುವಟಿಕೆಗಳ ವರದಿಯನ್ನಿತ್ತರು. ಅದಾದ ಬಳಿಕ ಲೆಕ್ಕಪತ್ರವನ್ನು ಸಭೆಯ ಮುಂದಿಡಲಾಯಿತು. ಅವುಗಳು ಸರ್ವಾನುಮತದಿಂದ ಮಂಜೂರಾದ ಬಳಿಕ ಸಂಘದ ಉಪಾಧ್ಯಕ್ಷರಾದ ಕಾಂ. ಕೆ. ಮೂಸಬ್ಬನವರು ಈ ಕೆಳಗಿನ ಠರಾವುಗಳನ್ನು ಸಭೆಯ ಮುಂದೆ ಮಂಡಿಸಿದರು. "ಪ್ರಾವಿಡೆಂಟ್ ಫಂಡ್" ಯೋಜನೆಗೆ ಸಂಬಂಧಪಟ್ಟ ಅವುಗಳ ಆಫೀಸಿನಿಂದ ಮಜೂರರಿಗಾಗಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಒತ್ತಾಯಿಸುವ, ಇ.ಎಸ್.ಐ. ಸ್ಕೀಮಿನಿಂದ ಮಜೂರರಿಗೆ ದೊರಕುವ ಸವಲತ್ತುಗಳು ಸರಿಯಾಗಿ ಸಿಗದಿರುವುದು, ಇ. ಎಸ್. ಐ. ಆಸ್ಪತ್ರೆಯು ಈವರೆಗೆ ತೆರೆಯದಿರುವುದು, ಮೇನೇಜುಮೆಂಟಿನಿಂದ ಹಣ ವಸೂಲಿಮಾಡದೆ (ಮಜೂರರಿಗೆ) ತೊಂದರೆ ಕೊಡುತ್ತಿರುವುದೇ ಮೊದಲಾದ ಕಿರುಕುಳಗಳನ್ನು ಕೊನೆಗೊಳಿಸಬೇಕೆಂದು ಸಂಬಂಧಪಟ್ಟ ಇಲಾಖೆಯನ್ನು ಒತ್ತಾಯಿಸುವ, ಮತ್ತು ಕುಂದಾಪುರ ಮತ್ತು ಮಂಗಳೂರು ಪ್ರದೇಶಗಳಲ್ಲಿರುವ ಹಂಚಿನ ಕಾರ್ಮಿಕರು ಮೇನೇಜುಮೆಂಟಿನ ಮುಂದಿಟ್ಟಿರುವ ಕೇಳಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಹಂಚಿನ ಕಾರ್ಖಾನೆಗಳ ಮೇನೇಜುಮೆಂಟುಗಳನ್ನು ಒತ್ತಾಯಪಡಿಸುವ, ಅಲ್ಲದೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮುವಾದೀ ಶಕ್ತಿಗಳು ಹಾಗೂ ಸರ್ವಾಧಿಕಾರೀ ಶಕ್ತಿಗಳನ್ನು ಸೋಲಿಸಬೇಕೆಂಬ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಸಭೆಗೆ ಅತಿಥಿಗಳಾಗಿ ಆಗಮಿಸಿದ ದ. ಕ. ಜಿಲ್ಲಾ ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಉಮಾನಾಥ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಪರವಾಗಿ ಕಾಂ. ಕೆ. ಆರ್. ಶ್ರೀಯಾನ್, ಸಭಿಕರ ಪರವಾಗಿ ಕಾರ್ಮಿಕರುಗಳಾದ, ವಿ. ಈಶ್ವರ, ಡಿ. ಗೋಪಾಲ, ಗೋಪಾಲದೇವಾಡಿಗ ಮೊದಲಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯು ಈ ಕೆಳಗಿನವರನ್ನು ಮುಂದಿನ ವರ್ಷದ ಆಡಳಿತ ಕಮಿಟಿಗೆ ಚುನಾಯಿಸಿತು.

ಪಿ. ರಾಮಚಂದ್ರರಾವ್ ಅಧ್ಯಕ್ಷ, ಕೆ. ಮೂಸಬ್ಬ, ಅಬ್ರಹಮ್ ಕರ್ಕಡ, ಬಿ. ನಾರಾಯಣ ಉಪಾಧ್ಯಕ್ಷರುಗಳು, ಬಿ.ಕೊರಗಪ್ಪರೈ ಪ್ರಧಾನ ಕಾರ್ಯದರ್ಶಿ. ಲೋಕಯ್ಯಶೆಟ್ಟಿ ಮತ್ತು ಯು. ಗಂಗಾಧರಶೆಟ್ಟಿ ಜೊತೆ ಕಾರ್ಯದರ್ಶಿಗಳು, ಸಿ. ನಾರಾಯಣ ಕೋಶಾಧಿಕಾರಿಗಳಲ್ಲದೆ, ನಾಲ್ಕು ಮಂದಿ ಸ್ತ್ರೀ ಮಜೂರರನ್ನೊಳಗೊಂಡ 31 ಮಂದಿಯನ್ನು ಆಡಳಿತ ಕಮಿಟಿ ಸದಸ್ಯರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು ಇಂದಿನ ರಾಜಕೀಯ ಪರಿಸ್ಥಿತಿಯನ್ನು ತನ್ನ ಭಾಷಣದಲ್ಲಿ ವಿವರಿಸಿದ್ದಲ್ಲದೆ. ನಮ್ಮ ದೇಶದಲ್ಲಿ ಕಾರ್ಮಿಕರ ಚಳುವಳಿಯನ್ನು ಮುಂದಕ್ಕೊಯ್ಯುವುದರಲ್ಲಿ ಸಿ. ಐ. ಟಿ. ಯು, ಅಂತೆಯೇ ರಾಜಕೀಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಾತ್ರ ಹಾಗೂ ಅದರ ಹೊಣೆಗಾರಿಕೆಗಳನ್ನು ವಿವರಿಸಿದರು.

ಸಭಾಂತ್ಯದಲ್ಲಿ ಕಾಂ. ಬಿ. ನಾರಾಯಣರು ಧನ್ಯವಾದಗಳನ್ನಿತ್ತರು. ○

ಐಕ್ಯತೆಯ ಹಾದಿಯಲ್ಲಿ

[ಒಂದನೇ ಪುಟದಿಂದ]

ಪ್ರಮುಖ ಗುಂಪುಗಳಾಗಿ ಅಸ್ತಿತ್ವಕ್ಕೆ ಬಂದಿವೆ. ಮೂರೂ ಗುಂಪುಗಳಲ್ಲಿ ಕೆಲವು ತೀವ್ರ ಭಿನ್ನಾಭಿಪ್ರಾಯಗಳಿರುವುದು ನಿಜ. ಅಂತಹ ಭಿನ್ನಾಭಿಪ್ರಾಯಗಳಲ್ಲಿ ಮುಖ್ಯವಾದದ್ದು, ಲೋಕದಳ-ಕಾಂಗ್ರೆಸ್ ಕೂಟದ ಗುಂಪು ಇಂದಿರಾ ಕಾಂಗ್ರೆಸ್ ಪ್ರತಿನಿಧಿಸುವ ಸರ್ವಾಧಿಕಾರಿ ಶಕ್ತಿಗಳನ್ನು ಹಾಗೂ ಜಾತೀಯವಾದಿಗಳ ಹಿಡಿತದಲ್ಲಿರುವ ಜನತಾಪಕ್ಷವನ್ನು ವಿರೋಧಿಸುತ್ತಿರುವುದು. ಈ ಅಂಶವನ್ನು ಎಡಪಕ್ಷಗಳು ಲೋಕದಳ-ಕಾಂಗ್ರೆಸ್ ಕೂಟಕ್ಕೆ ಬೆಂಬಲ ನೀಡುವಾಗ ಗಮನಿಸಿವೆ. ಆದರೂ, ಮೇಲಿನ ಮೂರೂ ಗುಂಪುಗಳು ಭೂ ಮಾಲಕ, ಬಂಡವಾಳಶಾಹಿಗಳನ್ನು ಪ್ರತಿನಿಧಿಸುವವರು ಎಂಬುದನ್ನು ಎಡಪಕ್ಷಗಳು ಮರೆತಿಲ್ಲ. ಇಂತಹ ತಿಳುವಳಿಕೆಯ ಆಧಾರದ ಮೇಲೆಯೇ ಸಿ.ಪಿ.ಐ., ಸಿ.ಪಿ.ಐ.(ಎಂ)ಹಾಗೂ ಎಡರಂಗದ ಎಲ್ಲಾ ಪಕ್ಷಗಳು ಒಂದುಗೂಡಿರುವುದು. ಕಳೆದ ಅನೇಕವರ್ಷಗಳ ನಿರಂತರ ಹೋರಾಟ, ಕಷ್ಟನಷ್ಟಗಳು ನಮಗೆ ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಟ್ಟಿವೆ.

ಹೊಸ ಬೆಳವಣಿಗೆಗಳು, ಎಡಪಕ್ಷಗಳ ಐಕ್ಯತೆಗೆ ಅಥವಾ ಎಡರಂಗ ಸರಕಾರಗಳ ಪತನಕ್ಕೆ "ಮಾರ್ಕ್ಸ್‌ವಾದಿಗಳ ಹಿರಿಯಣ್ಣತನ", ಸಿ.ಪಿ.ಐ.(ಎಂ.) "ಹಿಂಸಾತ್ಮಕ ಕೆಲಸಗಳಲ್ಲಿ ತೊಡಗಿತ್ತು", "ಮಾರ್ಕ್ಸ್‌ವಾದಿಗಳೇ ಎಡರಂಗವನ್ನು ತೊರೆದಿದ್ದು" ಮುಂತಾದ ಆಪಾದನೆಗಳು ಹುರುಳಿಲ್ಲದ ವಾದಗಳೆಂದು ತೋರಿಸಿಕೊಟ್ಟಿವೆ.

ಕಳೆದ ಹತ್ತು ವರ್ಷಗಳಲ್ಲಿ ಆಳುವ ವರ್ಗಗಳು ಎಡಪಕ್ಷಗಳನ್ನು ಛಿದ್ರ ಮಾಡಿ, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ನ್ನು ಪ್ರತ್ಯೇಕ ಮಾಡಿದ ದುರಂತ ಚರಿತ್ರೆಯಿಂದ ಎಲ್ಲಾ ಎಡಪಕ್ಷಗಳು ಪಾಠಕಲಿಯುತ್ತಾರೆಂದು ನಾವು ಆಶಿಸುತ್ತೇವೆ. ಕೇವಲ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ಗಳ ಮೈತ್ರಿಯಿಂದ ಎಡ ಐಕ್ಯತೆ ಸಾಧಿಸಿದಂತಾಗಲಿಲ್ಲ. ಇತರೆ ಎಡಪಕ್ಷಗಳು, ಯಾವ ರಾಜಕೀಯ ಪಕ್ಷಗಳಿಗೂ ಸೇರದ ಪ್ರಗತಿಪರರು, ವಿಶಾಲ ಪ್ರಜಾಪ್ರಭುತ್ವವಾದಿಗಳು ಇವರೆಲ್ಲರನ್ನು ಒಂದುಗೂಡಿಸುವ ಮಹತ್ವದ ಕೆಲಸ ನಮ್ಮ ಮುಂದಿದೆ. ಈ ಐಕ್ಯತೆಯ ಹಾದಿಯಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳ ಮೈತ್ರಿಯು ಒಂದು ಪ್ರಾರಂಭಿಕ ಹೆಜ್ಜೆಯಾಗಿದೆ. ○

ಚಂಡಗೋಡು ದಲಿತರ ಹೋರಾಟಕ್ಕೆ ಎಸ್.ಎಫ್.ಐ. ಬೆಂಬಲ

ಚಿಕ್ಕಮಗಳೂರು ತಾಲ್ಲೂಕು ಚಂಡಗೋಡು ದಲಿತರು ಭೂಮಿಗಾಗಿ ಸೆಪ್ಟೆಂಬರ್ 24ರಿಂದ ಚಿಕ್ಕಮಗಳೂರು ತಾಲ್ಲೂಕು ಕಛೇರಿ ಎದುರು ದಲಿತ ಸಂಘರ್ಷ ಸಮಿತಿಯ ವತಿಯಿಂದ ಅನಿರ್ದಿಷ್ಟ ಕಾಲದವರೆಗೆ ಸತ್ಯಾಗ್ರಹ ಹೂಡಿದ್ದರು ಮತ್ತು ಇದೇ ಅ. 5ರಿಂದ ಸರದಿ ಉಪವಾಸ ಮುಷ್ಕರವನ್ನೂ ಸಹ ಹೂಡಿ ಅಕ್ಟೋಬರ್ 10ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು. ದ.ಸ.ಸ. ರವರ ಕರೆಯ ಮೇರೆಗೆ ದಿನಾಂಕ 11-10-79ರಂದು ಎಸ್.ಎಫ್.ಐ. ವತಿಯಿಂದ ಐ. ಡಿ. ಎಸ್.ಜಿ. ಸರ್ಕಾರಿ ಕಾಲೇಜಿನ ಸುಮಾರು 150ಜನ ವಿದ್ಯಾರ್ಥಿಗಳು ಘೋಷಣೆಗಳೊಂದಿಗೆ ಪಟ್ಟಣದ ಬೀದಿಯಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು.

ಇದರ ನಾಯಕತ್ವವನ್ನು ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಚಿಕ್ಕಮಗಳೂರು ಶಾಖೆಯ ಕಾರ್ಯದರ್ಶಿಯವರಾದ ಕಾಂ. ಸ. ಪು. ಪ್ರಕಾಶ್ ವಹಿಸಿದ್ದರು. ○

ಬಂಟ್ವಾಳದಲ್ಲಿ ಮಾರ್ಕ್ಸಿಸ್ಟ್ ಪಕ್ಷದ ಸಭೆ

ತಾ. 9-10-1979 ರಂದು ಬಂಟ್ವಾಳದ ವ್ಯಾಯಾಮ ಶಾಲೆಯಲ್ಲಿ ಮಾರ್ಕ್ಸಿಸ್ಟ್ ಪಕ್ಷದ ಸರ್ವ ಸದಸ್ಯರ ಸಭೆಯು ಕಾಂ. ಪಿ. ರಾಮಚಂದ್ರ ರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಕಾಂ. ಬಿ. ಎಚ್. ಬಂಗೇರರು ಸ್ವಾಗತಿಸಿದರು. ಕರ್ನಾಟಕ ರಾಜ್ಯದ ಮಾರ್ಕ್ಸಿಸ್ಟ್ ಪಕ್ಷದ ಮುಂದಾಳು ಕಾಂ.ಎನ್.ಎಲ್. ಉಪಾಧ್ಯಾಯರು ಪ್ರಚಲಿತ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿವರಣೆಯನ್ನು ನೀಡಿ, ಇಂದಿನ ಪರಿಸ್ಥಿತಿಯಲ್ಲಿ ಮಾರ್ಕ್ಸಿಸ್ಟ್ ಪಕ್ಷದ ನಿಲುವೆ ಸರಿಯಾದದ್ದು ಎಂದು ಪಕ್ಷದ ಕಾರ್ಯಕರ್ತರಿಗೆ ತಿಳಿಸಿದರು.

ಅಧ್ಯಕ್ಷ ಸ್ಥಾನದಿಂದ ಕಾಂ. ಪಿ. ರಾಮಚಂದ್ರರಾವ್ ಮಾತನಾಡುತ್ತಾ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಯಾಕೆ ಸೋಲಿಸಬೇಕು ಎಂಬುವುದಾಗಿ ವಿವರಿಸಿದರು.

ಇತ್ತೀಚೆಗೆ ಬಲಕಮ್ಯುನಿಸ್ಟ್ ಪಕ್ಷಕ್ಕೆ ರಾಜಿನಾಮೆ ನೀಡಿ ಮಾರ್ಕ್ಸಿಸ್ಟ್ ಪಕ್ಷಕ್ಕೆ ಸೇರಿರುವ ಸಿಲ್ವೆಸ್ಟರ್ ಕಾರ್ಲೊ ಮತ್ತು ಕ್ಲೋಡಿ ರೋಡ್ರಿಗಸ್ ಎಂಬುವರ ಮೇಲೆ 6-10-1979 ರಂದು ರಾತ್ರಿ ಸಮಯದಲ್ಲಿ ಹಲ್ಲೆ ನಡೆಸಿರುವ ಬಲಕಮ್ಯುನಿಸ್ಟ್ ಪಕ್ಷದ ನೀತಿಯನ್ನು ಖಂಡಿಸುವ ಮತ್ತು ತಪ್ಪಿತಸ್ಥ ಬಲಕಮ್ಯುನಿಸ್ಟರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯ ಪೋಲೀಸ್ ಅಧಿಕಾರಿಯವರನ್ನು ಒತ್ತಾಯಿಸುವ ಠರಾವನ್ನು ಕಾಂ. ಬಿ. ನಾರಾಯಣನವರು ಸಭೆಯ ಮುಂದಿಟ್ಟರು. ಸಭೆಯು ಸರ್ವಾನುಮತದಿಂದ ಠರಾವನ್ನು ಮಂಜೂರು ಮಾಡಿತು. ಬಳಿಕ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು. ○

ಕೇಂದ್ರ ಕಿಸಾನ್ ಕೌನ್ಸಿಲ್ ಸಭೆ ಮುಂದೂಡಲಾಗಿದೆ

ಇದೇ ಅಕ್ಟೋಬರ್ 25, 27 ಮತ್ತು 28 ರಂದು ಬೆಂಗಳೂರಿನಲ್ಲಿ ನಡೆಯಬೇಕಾಗಿದ್ದ ಕೇಂದ್ರ ಕಿಸಾನ್ ಕೌನ್ಸಿಲ್ ಸಭೆಯನ್ನು ಕೆಲವು ಅನಿರೀಕ್ಷಿತ ಕಾರಣಗಳಿಂದ ಮುಂದೂಡಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ತರ್ ಅವರು ತಂತಿ ಮೂಲಕ ತಿಳಿಸಿರುವರು. ಆದುದರಿಂದ ಕೇಂದ್ರ ಕಿಸಾನ್ ಕೌನ್ಸಿಲ್ ಸಭೆಯ ಕಾರ್ಯಕ್ರಮವು ಯೋಜನೆ ಹಾಕಿದಂತೆ ಬೆಂಗಳೂರಲ್ಲಿ ನಡೆಯುವುದಿಲ್ಲ.

ಆದರೆ ಬೆಂಗಳೂರು ಜಿಲ್ಲಾ ರೈತಸಂಘ ಸಮ್ಮೇಳನವು ಅಕ್ಟೋಬರ್ 27 ಮತ್ತು 28 ರಂದು ಬೆಂಗಳೂರಿನಲ್ಲಿ ಆಂಧ್ರ ದೇವಾಂಗ ಸಂಘದ ಹಾಲಿನಲ್ಲಿ ನಡೆಯುತ್ತದೆ. 28 ರಂದು ಜಿಲ್ಲಾ ಸಮ್ಮೇಳನದ ಅಂಗವಾಗಿ ರೈತ, ಕೃಷಿಕೂಲಿಗಾರರ ಮತ್ತು ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಚಿಕ್ಕಲಾಲ್‌ಬಾಗಿನಲ್ಲಿ ಸಂಜೆ 6ಕ್ಕೆ ಬಹಿರಂಗ ಸಭೆ ಜರುಗಲಿದೆ. ಈ ಸಭೆಯಲ್ಲಿ ಕಾಂ. ಚಾತುನ್ನಿ ಮಾಸ್ತರ್, ಕಾಂ. ಗೋದಾವರಿ ಪರುಳೇಕರ್ ಮೊದಲಾದವರು ಭಾಗವಹಿಸುವರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT